ಕರ್ನಾಟಕತ್ವದ ಜಾಗೃತಿ

ಡಾ|| ಸೂರ್ಯನಾಥ ಕಾಮತ್

56

ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಕರ್ನಾಟಕತ್ವದ ಜಾಗೃತಿ

ಡಾ॥ ಸೂರ್ಯನಾಥ ಕಾಮತ್

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

KARNATAKATVADA JAGRUTI by Dr. Suryanatha Kamat, Published by the Prasaranga, Bangalore University, Bangalore. Pp. 32+viii

ಪ್ರಕಾಶಕರು :
ಹೆಚ್. ಆರ್. ದಾಸೇಗೌಡ
ನಿರ್ದೇಶಕ, ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು – 560056

ಬೆಲೆ : 0–50 ಪೈಸೆ

ಮುದ್ರಣ :
ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ, ಬೆಂಗಳೂರು

ಮುನ್ನುಡಿ

ವಿಶ್ವವಿದ್ಯಾಲಯಗಳು ಕೇವಲ ತಿಳುವಳಿಕೆಯ ಕೇಂದ್ರ ಗಳಾದರೆ ಸಾಲದು. ಅವು ಸುತ್ತಮುತ್ತಲಿನ ಜನತೆಯ ಶೈಕ್ಷಣಿಕ ಸಾಂಸ್ಕೃತಿಕ ಆಗುಹೋಗುಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು ಅವಶ್ಯಕ. ಪಾಠಪ್ರವಚನ, ಉನ್ನತ ವ್ಯಾಸಂಗ ಮತ್ತು ಸಂಶೋಧನೆಗಳಿಗೆ ಮಾತ್ರ ವಿಶ್ವವಿದ್ಯಾಲಯ ಗಳ ಕಾರ್ಯವ್ಯಾಪ್ತಿ ಸೀಮಿತವಾಗಿರಬಾರದು. ಸಾಮಾನ್ಯ ಜನತೆಯಲ್ಲಿ ಅರಿವಿನ ಸಿರಿಯನ್ನು ಹಂಚುವ ಹೊಣೆ ಹೊತ್ತು ವಿಶ್ವವಿದ್ಯಾಲಯಗಳು ಜ್ಞಾನಪ್ರಸಾರ ಕೇಂದ್ರಗಳಾಗಿ ಮುನ್ನಡೆಯಬೇಕು.

ಬೆಂಗಳೂರು ವಿಶ್ವವಿದ್ಯಾಲಯವು ಕಳೆದ ಹಲವಾರು ವರ್ಷಗಳಿಂದ ನಗರದ ನಾನಾ ಸಂಘಸಂಸ್ಥೆಗಳಲ್ಲಿ ಕಾರ್ಖಾನೆ ಕಾರ್ಮಿಕ ಕೂಟಗಳಲ್ಲಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸುತ್ತ ಬಂದಿದೆ. ಆಯಾ ವಿಷಯಗಳಲ್ಲಿ ಪರಿಣತರಾದವರು ಭಾಷಣಗಳನ್ನು ನೀಡಿ, ಅನಂತರ ಅವುಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ನಮ್ಮೊಡನೆ ಸಹಕರಿಸುತ್ತಿರುವುದು ಸಂತಸದ ಸಂಗತಿ. ಅತ್ಯಧಿಕ ಸಂಖ್ಯೆಯಲ್ಲಿ ನಮ್ಮ ಜನತೆಯ ಕೈಸೇರಲೆಂದು ಈ ಕಿರುಹೊತ್ತಿಗೆ ಗಳನ್ನು ಸುಲಭ ಬೆಲೆಯಲ್ಲಿ ಪ್ರಕಟಿಸುತ್ತಿದ್ದೇವೆ. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳ ಶ್ರೀಮಂತಿಕೆಯನ್ನು ಹೆಚ್ಚಿಸಿ,

ಜನಸಾಮಾನ್ಯರ ತಿಳಿವನ್ನು ಉತ್ತಮಗೊಳಿಸುವ ದಿಸೆಯಲ್ಲಿ ಈ ಹೊತ್ತಿಗೆಗಳು ಸಹಕಾರಿಯಾಗಲೆಂದು ನಾನು ಮನಸಾರೆ ಹಾರೈಸುತ್ತೇನೆ.

ಈ ಉಪಯುಕ್ತ ಕೃತಿಯನ್ನು ಹೊರತರುವಲ್ಲಿ ವಿಶ್ವ ವಿದ್ಯಾಲಯದ ಪ್ರಸಾರಾಂಗದ ಜೊತೆ ಸಹಕರಿಸಿದ ಡಾ॥ ಸೂರ್ಯನಾಥ ಕಾಮತ್ ಅವರಿಗೆ ವಿಶ್ವವಿದ್ಯಾಲಯದ ಪರ ವಾಗಿ ನನ್ನ ಅಭಿನಂದನೆಗಳು.

ಡಾ॥ ಎಂ. ಎಸ್. ವಿಶ್ವನಾಥಯ್ಯ

ಉಪಕುಲಪತಿ

ಲೇಖಕರ ಮಾತು

ಕರ್ನಾಟಕ ರಾಜ್ಯೋತ್ಸವದ ಹಿನ್ನೆಲೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗ 'ದುಡಿಯುವ ಜನತೆಗೆ ಮೌಲ್ಯ ಪ್ರಸಾರ' ಮಾಡುವ ಉದ್ದೇಶದಿಂದ 'ಕರ್ನಾಟಕತ್ವದ ಜಾಗೃತಿ' ಎಂಬ ವಿಷಯ ಕುರಿತು ಪ್ರಚಾರೋಪನ್ಯಾಸ ಮಾಲೆ ಯಲ್ಲಿ ಒಂದು ಉಪನ್ಯಾಸ ನೀಡಲು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ, ಕರ್ನಾಟಕ ಸಂಘದಲ್ಲಿ ಬ್ಯಾಂಕಿನ ಕರ್ನಾಟಕ ಸಂಘದ ಸಹಕಾರದಿಂದ ದಿನಾಂಕ 22-11-1980 ರಂದು ಏರ್ಪಡಿಸಿತ್ತು. ಕರ್ನಾಟಕ ರಾಜ್ಯೋತ್ಸವವನ್ನು ಆಚರಿಸುವಾಗ ಈ ಉತ್ಸವದ ನಿಜವಾದ ಮಹತ್ವ, ಹಿನ್ನೆಲೆಗಳ ಕಲ್ಪನೆ ಕಣ್ಮರೆ ಯಾಗುತ್ತಿದೆಯೇನೋ ಅನ್ನಿಸುತ್ತಿದೆ. ಕರ್ನಾಟಕದ ಏಕೀಕರಣ ಏಕಾಯಿತು? ಇದರ ಹಿನ್ನೆಲೆಯಾಗಿ ನಿಂತ ಸಂಗತಿಗಳೇನು? ಏಕೀಕರಣಕ್ಕೆ ಮೊದಲು ಕನ್ನಡಿಗರು ಅನುಭವಿಸಿದ ಕಷ್ಟ ಕೋಟಲೆಗಳೇನು—ಈ ಸಂಗತಿಗಳನ್ನು ತಿಳಿದಲ್ಲಿ ರಾಜ್ಯೋತ್ಸವದ ಆಚರಣೆ ಹೆಚ್ಚು ಅರ್ಥಪೂರ್ಣವಾದೀತೆಂದು ನನಗೆ ತೋರಿತು. ಈ ದಿಕ್ಕಿನಲ್ಲಿ ನಾನು ಮಂಡಿಸಿದ ವಿಷಯ ಇದು.

ಈ ಉಪನ್ಯಾಸ ಏರ್ಪಡಿಸಲು ಕಾರಣರಾದ ವಿಶ್ವವಿದ್ಯಾ ಲಯದ ಪ್ರಸಾರಾಂಗದ ಉಪನಿರ್ದೇಶಕರಾದ ಶ್ರೀ ಕೆ. ಸಿ. ಶಿವಪ್ಪನವರಿಗೂ ಮತ್ತು ಇದನ್ನು ಪ್ರಕಟಿಸಿದ ಪ್ರಸಾರಾಂಗದ ನಿರ್ದೇಶಕರಾದ ಶ್ರೀ ಹೆಚ್. ಆರ್. ದಾಸೇಗೌಡ ಅವರಿಗೂ ನನ್ನ ಕೃತಜ್ಞತಾಪೂರ್ವಕವಾದ ವಂದನೆಗಳು ಸಲ್ಲುತ್ತವೆ.

ಸೂರ್ಯನಾಥ ಕಾಮತ್

ಕರ್ನಾಟಕತ್ವದ ಜಾಗೃತಿ

ಕರ್ನಾಟಕತ್ವದ ಜಾಗೃತಿ

ಇಂದು ಕರ್ನಾಟಕವು ಏಕಾಡಳಿತಕ್ಕೆ ಒಳಪಟ್ಟಿದೆ ; ಭಾರತ ಗಣರಾಜ್ಯದಲ್ಲಿ ಒಂದು ಪ್ರಾಂತ ಅಥವಾ ಪ್ರದೇಶವೆನಿಸಿದೆ. ದೇಶವ ಯಾವ ಮೂಲೆಯಲ್ಲಾದರೂ ನೆಲೆಸಿರುವ ಕನ್ನಡಿಗನಿಗೆ, ತಾನು ಕರ್ನಾಟಕದವನೆಂಬ ಒಂದು ಖಚಿತ ಸ್ಥಾನಮಾನ, ಪ್ರತಿಷ್ಠೆ ಲಭಿಸಿದೆ. ಕೈಗಾರಿಕೆ, ಕ್ರೀಡೆ, ಸಾಹಿತ್ಯ, ಶಿಕ್ಷಣ, ವಿಜ್ಞಾನ ಹಾಗೂ ಕಲೆ ಮತ್ತು ಇತರ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಕರ್ನಾಟಕಕ್ಕೆ ಇಂದು ಅಖಿಲ ಭಾರತ ಸ್ಥಾನಮಾನ ಲಭಿಸಿದೆ. ಶಿವರಾಮ ಕಾರಂತ, ಕುವೆಂಪು, ಬೇಂದ್ರೆ, ಗೋಕಾಕ, ಗಿರೀಶ ಕಾರ್ನಾಡ, ಬಿ. ವಿ. ಕಾರಂತ, ಕೆ. ಕೆ. ಹೆಬ್ಬಾರ್, ಟಿ. ಎ. ಪೈ, ಎಂ. ವಿ. ಕಾಮತ್, ಜನರಲ್ ಕಾರಿಯಪ್ಪ, ಪಾವಟೆ, ಪ್ರಕಾಶ, ಪಡುಕೋಣೆ, ಎಂ. ವಿಶ್ವೇಶ್ವರಯ್ಯ, ರಾಜಾರಾಮಣ್ಣ, ಯು. ಆರ್. ರಾವ್, ಭೀಮಸೇನ ಜೋಶಿ, ಮಲ್ಲಿಕಾರ್ಜುನ ಮನ್ಸೂರ್, ವಿ. ಕೆ. ಆರ್. ವಿ. ರಾವ್, ಹೀಗೆ ಒಂದೊಂದು ಹೆಸರನ್ನು ತೆಗೆದುಕೊಂಡಾಗಲೂ ಇವರು ಕರ್ನಾಟಕದ ಗಣ್ಯ ವ್ಯಕ್ತಿಗಳು, ಕನ್ನಡಿಗರು, ಎಂದು ಯಾರಾದರೂ ಅವರನ್ನು ಗುರುತಿಸುತ್ತಾರೆ. ಕನ್ನಡಿಗರಿಗೆ ತಾನು ಅವರ ಪ್ರಾಂತದವ ನೆಂದು ಹೇಳಿಕೊಳ್ಳಲು ಹೆಮ್ಮೆ ಅನಿಸುತ್ತದೆ. ಕನ್ನಡಿಗರ ಪುರೋಗಮನಕ್ಕೆ ಶ್ರಮಿಸುವ, ಕನ್ನಡಿಗರ ಆಶೆ, ಆಕಾಂಕ್ಷೆಗಳನ್ನು ಬಿಂಬಿಸಲು ನೆರವಾಗುವ ನಮ್ಮದೇ ಆದ ಒಂದು ಸರಕಾರವು ನಮಗಿದೆ.

ಆದರೆ, ಕಾಲು ಶತಮಾನದ ಹಿಂದೆ ಇಂಥ ಒಂದು ಕರ್ನಾಟಕವೆಂಬ ರಾಜ್ಯವೇ ಇರಲಿಲ್ಲ! ಅರ್ಧ ಶತಮಾನದ ಹಿಂದೆ ಇಂಥ ಒಂದು ಕರ್ನಾಟಕವೆಂಬ ರಾಜ್ಯದ ಸ್ಥಾಪನೆ ಅಥವಾ ಕನ್ನಡವನ್ನಾಡುವ ಪ್ರದೇಶಗಳೆಲ್ಲದರ ಏಕೀಕರಣವಾದೀತೆಂಬ ಕಲ್ಪನೆ ಕನಸಿನ ಗಂಟೇ ಆಗಿತ್ತು. ಇದಲ್ಲದೆ, ಈ ಶತಮಾನದ ಆರಂಭಕ್ಕೆ ಕರ್ನಾಟಕವೆಂಬ ಒಂದು ರಾಜ್ಯದ ಕಲ್ಪನೆ ಯಾರ ಮುಂದೆಯೂ ಇರಲಿಲ್ಲ. ಮತ್ತು ಮೈಸೂರು ಸಂಸ್ಥಾನವನ್ನು ಹೊರತುಪಡಿಸಿ ಬಹುಪಾಲು ಕನ್ನಡ ಪ್ರದೇಶಗಳು ಕನ್ನಡಿಗರಲ್ಲದವರ ಆಡಳಿತಕ್ಕೆ ಒಳಪಟ್ಟು ಕನ್ನಡ ಭಾಷೆಯೇ ಆ ಪ್ರದೇಶಗಳಿಂದ ಕಣ್ಮರೆಯಾಗಿರುವ ಪರಿಸ್ಥಿತಿ ಇತ್ತು.

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಕೃಷ್ಣಾನದಿಯ ದಕ್ಷಿಣಕ್ಕಿರುವ, ಎಂದರೆ ಬಹುಪಾಲು (ಶೇಕಡಾ 85) ಕನ್ನಡ ಪ್ರದೇಶಗಳಲ್ಲಿ ಕನ್ನಡವೇ ಆಡಳಿತ ಭಾಷೆಯಾಗಿತ್ತು. ಉಳಿದ ಕನ್ನಡ ಪ್ರದೇಶಗಳಲ್ಲಿ ಮೊದಲು ಬಹಮನಿ ಹಾಗೂ ಮುಂದೆ ಬಿದರೆಯ ಬರೀದ್‌ಷಾಹಿ ಹಾಗೂ ವಿಜಾಪುರದ ಆದಿಲ್‌ಷಾಹಿಗಳ ರಾಜ್ಯವಿದ್ದು ಆ ರಾಜ್ಯಗಳಲ್ಲಿ ಪರ್ಷಿಯನ್ ಭಾಷೆಗೆ ಆಡಳಿತದಲ್ಲಿ ಪ್ರಾಧಾನ್ಯವಿದ್ದರೂ ಕನ್ನಡವನ್ನು ಅವರು ಕಡೆಗಣಿಸಿರಲಿಲ್ಲ. ಆದರೆ ದುರ್ದೈವದಿಂದ ಆ ಪ್ರದೇಶಗಳಲ್ಲಿ ನಿಧಾನವಾಗಿ ಮರಾಠಿಗೆ ಪ್ರಾಧಾನ್ಯ ಹೆಚ್ಚಿ ಕನ್ನಡ ಮೂಲೆ ಪಾಲಾಯಿತು. ವಿಜಯನಗರದ ತಮ್ಮ ಶತ್ರು ರಾಜರು ಕನ್ನಡಿಗರಾದುದರಿಂದ ಕನ್ನಡಿಗರಿಗೆ ಪ್ರತಿಯಾಗಿ ಹೆಚ್ಚಾಗಿ ಮರಾಠಿಗರನ್ನೇ ಷಾಹೀ ರಾಜರು ತಮ್ಮಲ್ಲಿ ನೌಕರಿಗೆ ನೇಮಕ ಮಾಡಿದ್ದರಿಂದ ಮರಾಠಿಗೆ

ವಿಜಾಪುರ ರಾಜ್ಯದಲ್ಲಿ ಕನ್ನಡಕ್ಕಿಂತ ಹೆಚ್ಚು ಪ್ರಾಧಾನ್ಯ ಬಂತು.

ವಿಜಯನಗರದ ಪತನದ ನಂತರ ಕೆಳದಿ, ಮೈಸೂರುಗಳಲ್ಲಿ ಮಾತ್ರ ಕನ್ನಡವೇ ಆಡಳಿತ ಭಾಷೆಯಾಗಿ ಉಳಿಯಿತು. ಇತರ ಅನೇಕ ಕನ್ನಡ ಸಂಸ್ಥಾನಗಳು ಕಣ್ಮರೆಯಾದವು. ಕೆಳದಿ ರಾಜ್ಯವು 1763ರಲ್ಲಿ ಮೈಸೂರಲ್ಲಿ ಸೇರಿಹೋಯಿತು. ಹೈದರ್ ಅದನ್ನು ಗೆದ್ದುಕೊಂಡ. ಹೈದರ್ ಮತ್ತು ಟಿಪ್ಪುವಿನ ಕಾಲದಲ್ಲಿ ಅನೇಕ ಕಾರಣಗಳಿಂದಾಗಿ ತಮಿಳು ನಾಡಿನಿಂದ ಬಂದ ಮರಾಠಿ ಭಾಷಿಕ ಜನರು ಆಡಳಿತದಲ್ಲಿ ಮೇಲ್ಗೈ ಪಡೆದರು. ಇದರಿಂದ ಮರಾಠಿಗೆ ಆಡಳಿತದಲ್ಲಿ ಕನ್ನಡಕ್ಕೆ ಸಮಾನವಾದ ಸ್ಥಾನಮಾನ ಬಂತು. ಆದರೆ ಆಗ ಮೈಸೂರು ರಾಜ್ಯದಲ್ಲಿ ಶೇಕಡ ಒಂದರಷ್ಟು ಜನರೂ ಮರಾಠಿ ಬಲ್ಲವರಾಗಿರಲಿಲ್ಲ! ಬಹುಶಃ ಅಕ್ಷರ ಜ್ಞಾನವುಳ್ಳ ಸ್ಥಳೀಯ ಜನರು ಆಗ ಮೂಲೆಗುಂಪು ಮಾಡಲ್ಪಟ್ಟ ಹಿಂದೂ ಅರಸನ ಬಗ್ಗೆ ನಿಷ್ಠೆ ಹೊಂದಿದ್ದರಿಂದ ಮತ್ತು ಇದರಿಂದಾಗಿ ಅವರ ಬಗ್ಗೆ ಹೈದರ್, ಟಿಪ್ಪುಗಳಿಗೆ ಅಪನಂಬಿಕೆ ಇದ್ದುದರಿಂದ ಈ ತಮಿಳು ನಾಡಿನಿಂದ ಬಂದ ಮರಾಠಿಗರನ್ನು ಆಡಳಿತಾಧಿಕಾರಿಗಳನ್ನಾಗಿ ಆಗ ನೇಮಿಸಿರಲೂ ಬಹುದು. ಟಿಪ್ಪುವಿನ ಕಾಲದಲ್ಲಿ ಶಿವಮೊಗ್ಗ ಜಿಲ್ಲೆಯ ಹೊದಿಗೆರೆ ಊರಲ್ಲಿನ ಮುಸಲ್ಮಾನ ಖಾಜಿಯೊಬ್ಬನಿಗೆ ಟಿಪ್ಪು ನೀಡಿದ ಒಂದು ಸನದಿನ ಪತ್ರ ಮರಾಠಿಯಲ್ಲಿ (ಪರ್ಷಿಯನ್‌ನಲ್ಲೂ ಅಲ್ಲ) ಇದೆ, ಎಂದರೆ, ಮರಾಠಿಗೆ ಆಗ ಎಂಥ ಮಹತ್ವ ಬಂದಿತ್ತೆಂದು ಊಹಿಸಬಹುದು. ಮುಂದೆ ಟಿಪ್ಪುವಿನ ಪತನಾನಂತರವೂ ಆಡಳಿತದಲ್ಲಿ ಮರಾಠಿ ಜನರು ಪಡೆದಿದ್ದ ಮೇಲ್ಗೈ

ಯಿಂದಾಗಿ ಮರಾಠಿಯ ಪ್ರಾಬಲ್ಯ ಮುಂದುವರಿಯಿತು. ಕಬ್ಬನ್ ಕಮಿಶನರ್ ಆಗಿ ಮೈಸೂರು ರಾಜ್ಯಕ್ಕೆ ಬಂದಾಗ, 19ನೆಯ ಶತಮಾನದ ನಡುಭಾಗದಲ್ಲಿ, ಕನ್ನಡ, ಮರಾಠಿ, ಹೀಗೆ ಎರಡೂ ಭಾಷೆಗಳಲ್ಲಿ ಕಾಗದ ಪತ್ರಗಳನ್ನಿಡುವ "ಡಬ್ಬಲ್ ದಫ್ತರ್" ಪದ್ಧತಿಯನ್ನು ಆತನು ರದ್ದುಪಡಿಸಿ ಕನ್ನಡಕ್ಕೆ ಪ್ರಾಶಸ್ತ್ಯ ಕೊಟ್ಟರೂ ನಿಧಾನವಾಗಿ ಆಡಳಿತದಲ್ಲಿ ಇಂಗ್ಲಿಷ್‌ನ ಮೇಲ್ಗೈ ಆಗಲು ಆಗಲೇ ಆರಂಭ ಆಗಿತ್ತು. ಹೀಗಾಗಿ ಮರಾಠಿ ಹೋದರೂ ಇಂಗ್ಲಿಷ್ ಬಂತು. ಕನ್ನಡಕ್ಕೆ ಸಲ್ಲ ಬೇಕಾದ ಪಟ್ಟ ಸಲ್ಲಲಿಲ್ಲ. 1831 ರಿಂದ 1881ರ ವರೆಗೆ ಬ್ರಿಟಿಷರ ವಶದಲ್ಲಿ ಇದ್ದ ಮೈಸೂರು 1881ರಲ್ಲಿ ಮಹಾ ರಾಜರ ಕೈಗೆ ಬಂದಾಗ ಕನ್ನಡಕ್ಕೆ ಸಲ್ಲಬೇಕಾದ ಸ್ಥಾನಮಾನ ಸಲ್ಲಲು ಅವಕಾಶವಾಯಿತಾದರೂ ಹೊರ ಪ್ರಾಂತಗಳಿಂದ ಅಧಿಕಾರಿಗಳನ್ನು ಭರ್ತಿ ಮಾಡುವುದು ಮುಂದುವರಿದುದರಿಂದ ಪರಿಸ್ಥಿತಿಯಲ್ಲಿ ವಿಶೇಷ ಬದಲಾವಣೆ ಆಗಲಿಲ್ಲ. ಆದರೆ ಕನ್ನಡ ವನ್ನು ಪೂರ್ತಿಯಾಗಿ ಪದಚ್ಯುತಿಗೊಳಿಸಲು ಸಾಧ್ಯವಾಗದೆ, ಕನ್ನಡ ನಾಡಿನ ತಿರುಳಾಗಿ, ಕರ್ನಾಟಕಕ್ಕೆ ಬೀಜರೂಪವಾಗಿ ಮೈಸೂರು ಸಂಸ್ಥಾನವು ಉಳಿಯಿತು. ಕನ್ನಡಿಗರಾದ ಮಹಾ ರಾಜರು ಕನ್ನಡದ ರಕ್ಷಕರಾಗಿ ಉಳಿದರು.

ಆದರೆ ಮೈಸೂರಿಗಿಂತಲೂ ವಿಶಾಲವಾದ ಉಳಿದ ಕನ್ನಡ ಪ್ರದೇಶಗಳಲ್ಲಿ ಕನ್ನಡದ ಸ್ಥಿತಿ ಶೋಚನೀಯವಾಗಿತ್ತು. ಮರಾಠಿ, ಗುಜರಾತಿ ಹಾಗೂ ಸಿಂಧೀ ಭಾಷಿಕರನ್ನು ಒಳಗೊಂಡ ಮುಂಬೈ ಪ್ರಾಂತದಲ್ಲಿ ಕನ್ನಡದ 4½ ಜಿಲ್ಲೆಗಳಲ್ಲಿ (ಬೆಳಗಾವಿ, ವಿಜಾಪುರ, ಧಾರವಾಡ, ಉತ್ತರ ಕನ್ನಡ, ಹಾಗೂ ಸೊಲ್ಲಾಪುರದ ಭಾಗ

ಗಳು) ಕನ್ನಡವನ್ನು ಕೇಳುವವರೇ ಇಲ್ಲವೆಂಬ ಸ್ಥಿತಿ. ಧಾರವಾಡದಂಥ ಅಚ್ಚ ಕನ್ನಡ ಕೇಂದ್ರದಲ್ಲಿ 1920–22 ರವರೆಗೂ ಸಾರ್ವಜನಿಕ ಸಭೆಗಳೆಲ್ಲ ಮರಾಠಿಯಲ್ಲಿ ನಡೆಯುತ್ತಿದ್ದವು. "ಪೇಶ್ವೆಯ ಕಾಲದಿಂದಲೂ ಈ ಜಿಲ್ಲೆಯ ಮುಖ್ಯ ಪಟ್ಟಣಗಳಲ್ಲಿ ಮರಾಠೀ ಬಲ್ಲವರ ಪ್ರಾಬಲ್ಯವಿತ್ತು. ಕನ್ನಡಿಗರಿಗೂ ಮರಾಠಿ ಕಲಿಯುವುದು ಶಿಷ್ಟಾಚಾರವಾಗಿತ್ತು. ಕನ್ನಡಿಗರಿಗೆ ತಮ್ಮ ಪ್ರತ್ಯೇಕ ಅಸ್ತಿತ್ವದ ಅರಿವೇ ಇರಲಿಲ್ಲ," ಎಂದು ಈ ಬಗ್ಗೆ ಆಲೂರು ವೆಂಕಟರಾಯರು ತಮ್ಮ ಸ್ಮೃತಿಗಳಲ್ಲಿ ಅಂದಿನ ಚಿತ್ರ ನೀಡಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಅಂಕೋಲಾಗಳಂಥ ಪ್ರದೇಶಗಳಲ್ಲಿ ತರುಣರು ಮುಂಬೈ, ಪುಣೆಗಳ ಕಡೆಗೆ ನೌಕರಿಗೆ ಹೋಗಬೇಕೆಂದು ಬಯಸಿ ಮರಾಠಿ ಕಲಿಯುತ್ತಿದ್ದರು. ಈ ಭಾಗದ ಹುಡುಗಿಯರಂತೂ ಮದುವೆಯಾಗಿ ಮುಂಬೈಗೆ 'ರಫ್ತಾಗ'ಬೇಕಾದವರಾದುದರಿಂದ, ಹೆಚ್ಚು ಕಡಿಮೆ ಇಂದಿಗೂ ಮರಾಠಿ ಕಲಿಯುತ್ತಾರೆ. ಅಂದಿನ ವಿಚಾರವಂತೂ ಹೇಳಬೇಕಾಗಿಯೇ ಇಲ್ಲ. ಮಂಗಳೂರು (ದಕ್ಷಿಣ ಕನ್ನಡ), ಬಳ್ಳಾರಿ, ಕೊಳ್ಳೇಗಾಲ ಪ್ರದೇಶಗಳಂತೂ ಮದ್ರಾಸ್ ಅಧಿಪತ್ಯದ ಮೂರು ದಿಕ್ಕುಗಳಲ್ಲಿ ಮೂರು ಮೂಲೆ ಹಿಡಿದು ಕೊಂಡಿದ್ದವು. ಬಳ್ಳಾರಿಯಲ್ಲಿ ತೆಲುಗಿನ ಕಾಟ : ಕೊಳ್ಳೇಗಾಲದಲ್ಲಿ ತಮಿಳಿನ ಮೇಲಾಟ. ದಕ್ಷಿಣ ಕನ್ನಡದ ಜನಮಾತ್ರ ಹೇಗೋ, ಅಲ್ಲಿನ ಬಹುಸಂಖ್ಯ ಜನರ ಮಾತೃಭಾಷೆ ಕನ್ನಡ ಅಲ್ಲವಾಗಿದ್ದರೂ, ಕನ್ನಡವನ್ನು ಉಳಿಸಿಕೊಂಡು ಬಂದಿದ್ದರು. ಹೈದರಾಬಾದ್ ಸಂಸ್ಥಾನದಲ್ಲಿ ಉರ್ದುವಿನದೇ ಸಾಮ್ರಾಜ್ಯ. ಆಡಳಿತ, ಶಿಕ್ಷಣಗಳೆರಡೂ ಉರ್ದುವಿನಲ್ಲಿಯೇ.

ಇನ್ನು ಉಳಿದ 10–15 ಸಂಸ್ಥಾನಗಳು ಮರಾಠಿ ಅರಸರಿಗೆ ಸೇರಿದವುಗಳು – ಸವಣೂರು ನವಾಬರ ಸಂಸ್ಥಾನ ಪ್ರಾಂತದ ಹೊರತು. (ಈ ಭಾಗ 1818 ರ ವರೆಗೆ ಪೇಶ್ವೆಯ ಆಡಳಿತಕ್ಕೆ ಒಳಪಟ್ಟಿದ್ದೇ ಇದಕ್ಕೆ ಕಾರಣ). ಇಂಥ ಮರಾಠಿ ಅರಸರ ಆಡಳಿತಕ್ಕೆ ಒಳಪಟ್ಟ ಕನ್ನಡ ಸಂಸ್ಥಾನಗಳಲ್ಲಿ ಜತ್ತ, ಅಕ್ಕಲಕೋಟೆ, ಸಾಂಗಲಿ, ಮೀರಜ್, ಕುರುಂದವಾಡಗಳಂತೂ ಇಂದು ಕನ್ನಡಕ್ಕೇ ಇಲ್ಲವಾದವು; ಮಹಾರಾಷ್ಟ್ರದಲ್ಲಿ ಲೀನವಾಗಿಹೋದವು. ಕರ್ನಾಟಕತ್ವದ ಜಾಗೃತಿ ಆಗಿರದಿದ್ದರೆ ಜಮಖಂಡಿ, ಮುಧೋಳ, ರಾಮದುರ್ಗದಂಥ ಸಂಸ್ಥಾನಗಳಲ್ಲೂ ಇದೇ ಸ್ಥಿತಿ ಬರುತ್ತಿತ್ತೋ ಏನೋ!

ಜಮಖಂಡಿಯಂಥ ಸಂಸ್ಥಾನದಲ್ಲಿ ಕನ್ನಡ ಭಾಷಿಕರ ಸಂಖ್ಯೆ 90ಕ್ಕೂ ಹೆಚ್ಚು. ಆದರೆ ಆಡಳಿತ, ಶಿಕ್ಷಣ ಮರಾಠಿಯಲ್ಲಿ. ಇದರಿಂದ ಬೀದಿಯಲ್ಲಿ ತರಕಾರಿ ಕೊಳ್ಳುವಾಗಲೂ ಕನ್ನಡ ಮಾತನಾಡಲು ಜನ ನಾಚುವಂಥ ಸ್ಥಿತಿ. ಇನ್ನು ಈ ಕೆಲವು ಸಂಸ್ಥಾನಗಳ ಸ್ಥಿತಿ ಚಿತ್ರವಿಚಿತ್ರ! ಜಮಖಂಡಿಗೆ ಸೇರಿದ ಕುಂದಗೋಳ ಪ್ರದೇಶವು ಮೂಲ ಸಂಸ್ಥಾನದಿಂದ ಸುಮಾರು 100 ಮೈಲು ದೂರದಲ್ಲಿ, ಪ್ರತ್ಯೇಕವಾಗಿ ಒಂದು ದ್ವೀಪದಂತೆ ಇತ್ತು. ಈ ಎರಡು ಪ್ರದೇಶಗಳ ನಡುವೆ ಬೇರೆ ಬೇರೆ ಆಡಳಿತಗಳ ನೆಲ. ಇದೇ ರೀತಿ ಸಾಂಗಲಿ ಸಂಸ್ಥಾನಕ್ಕೆ ಸೇರಿದ ಷಾಪುರ ಒಂದೆಡೆ, ದೊಡ್ಡವಾಡ ಮತ್ತೊಂದೆಡೆ, ಶಿರಹಟ್ಟಿ ಇನ್ನೊಂದೆಡೆ ಹಾಗೂ ತೇರದಾಳ ಮಗದೊಂದೆಡೆ. ಮೀರಜ್‌ಗೆ ಸೇರಿದ ಲಕ್ಷ್ಮೇಶ್ವರ ಮೀರಜ್‌ನಿಂದ ನೂರು ಮೈಲು ದೂರದಲ್ಲಿ. ಔಂಧ್ ಸಂಸ್ಥಾನ (ಈಗ ಮಹಾರಾಷ್ಟ್ರದಲ್ಲಿದೆ) ದ ಆಡಳಿತಕ್ಕೆ

ಒಳಪಟ್ಟ ಗುಡದಾಳು ಮುಂತಾದ ಆರು ಗ್ರಾಮಗಳು ವಿಜಾಪೂರದ ಬಳಿಯಿದ್ದುವು. ಇಂದಿನ ಧಾರವಾಡ ಜಿಲ್ಲೆಯ ಗುಡಗೇರಿ ಇದೇ ರೀತಿ ಬುಧ್‌ಗಾಂವ್ (ಈಗಿನ ಮಾಧವನಗರ) ಎಂಬ ಮಿರಾಜ್ ಬಳಿಯ ಕಿರಿಯ ಮಿರಜ್ ಸಂಸ್ಥಾನಕ್ಕೆ ಸೇರಿತ್ತು. ಕೊಲ್ಹಾಪುರಕ್ಕೆ ಸೇರಿದ ಕಟಕೋಳ, ಕೊಂಗಾಲ್ ಮುಂತಾದ ಜಹಗೀರುಗಳೂ (ಈಗ ರಾಮದುರ್ಗ ತಾಲೂಕಿನಲ್ಲಿವೆ) ಮೂಲ ಸಂಸ್ಥಾನದಿಂದ ದೂರವಾಗಿ, ಪ್ರತ್ಯೇಕ ಜಹಗೀರು ದಾರರನ್ನೂ ಹೊಂದಿದ್ದು ತಮ್ಮ ಪಾಡಿಗೆ ವಿಚಿತ್ರವಾದ ವಾತಾವರಣದಲ್ಲಿ ಇದ್ದುವು. ಪೂನೆಯಿಂದ ಬೆಂಗಳೂರಿಗೆ ಬರುವ ರೈಲು ಮಾರ್ಗವು ಮುಂಬೈ ಮತ್ತು ಮೈಸೂರು ಈ ಎರಡು ಆಡಳಿತಗಳ ಜೊತೆ ಬುಧಗಾಂವ (ಈಗಿನ ಮಾಧವನಗರ), ಸಾಂಗಲಿ, ಮಿರಜ್, ಕೊಲ್ಹಾಪುರ (ರಾಯ ಭಾಗ), ಜಮಖಂಡಿ (ಕುಂದಗೋಳ) ಹಾಗೂ ಸವಣೂರು, ಹೀಗೆ ಒಟ್ಟು ಎಂಟು ಆಡಳಿತ ಪ್ರದೇಶಗಳಿಂದ ಹಾಯಬೇಕಾಗಿತ್ತು. (ಭಾರತ ಸ್ವತಂತ್ರವಾದಾಗ ಈ ಮಹಾರಾಜರುಗಳೂ ಸ್ವತಂತ್ರರಾಗಿದ್ದರೆ, ಈ ರೈಲು ದಾರಿಯಲ್ಲಿ ಪ್ರವಾಸಮಾಡುವಾಗ ಏನೇನು ಸಮಸ್ಯೆಗಳನ್ನು ಎದುರಿಸಬೇಕಾಗುತ್ತಿತ್ತೊ !)

ಕುಂದಗೋಳ ಇಲ್ಲವೆ ಶಿರಹಟ್ಟಿ ಇಲ್ಲವೆ ಗುಡಗೇರಿಯಲ್ಲಿ ಮಳೆಬಾರದೆ ಬೆಳೆಬಾರದಂತೆ ಆದಲ್ಲಿ ಆ ಬಗ್ಗೆ ಕಂದಾಯ ವಿನಾಯತಿ ಪಡೆಯಲು ಈ ಊರುಗಳ ರೈತರು ದೂರದಲ್ಲಿರುವ, ಅನ್ಯ ಆಡಳಿತ ಪ್ರದೇಶಗಳ ಆಚೆಗೆ ಇರುವ, ರಾಜಧಾನಿಗೆ ಹೋಗಿ ದರ್ಬಾರಿನಲ್ಲಿ ಅರ್ಜಿಕೊಟ್ಟು ಕಂದಾಯ ವಿನಾಯತಿಗೆ ಯತ್ನಿಸಬೇಕು. ಅಲ್ಲಿಗೆ ಹೋಗುವುದು ಕಷ್ಟ ; ಹೋಗದೇ ಇದ್ದಲ್ಲಿ ಕಷ್ಟವಂತೂ ಇದ್ದದ್ದೇ !

ಸಂಸ್ಥಾನಗಳಲ್ಲಿನ ಪರಭಾಷೆಯ ದಬ್ಬಾಳಿಕೆ ಒಂದು ಪರಿ. ಬ್ರಿಟಿಷ್ ಪ್ರಾಂತಗಳಲ್ಲಿನ ದಬ್ಬಾಳಿಕೆ ಇನ್ನೊಂದುಪರಿ. ಮುಂಬೈ ಪ್ರಾಂತದಲ್ಲಿ ಮರಾಠಿಗರ ಮತ್ತು ಗುಜರಾತಿಗಳ ಕಿತ್ತಾಟದಲ್ಲಿ ಕನ್ನಡಿಗರ ಧ್ವನಿ ಕ್ಷೀಣ. ಕನ್ನಡ ಪ್ರದೇಶಗಳ ಅಭಿವೃದ್ಧಿಗೆ ಸಿಗುವ ಹಣ ಅತ್ಯಲ್ಪ. ಇಡೀ ಮುಂಬೈ ಕರ್ನಾಟಕದಲ್ಲಿ 1940 ಪೂರ್ವದಲ್ಲಿ ಇದ್ದ ಕಾಲೇಜುಗಳು ಕೇವಲ ಎರಡು: ಧಾರವಾಡದ ಕರ್ನಾಟಕ ಕಾಲೇಜು (1917) ಮತ್ತು ಬೆಳಗಾವಿಯ ಲಿಂಗರಾಜ ಕಾಲೇಜು (1933). ಕೈಗಾರಿಕೆಗಳು ಗಳು ಬೆಳೆಯಲು ಬೇಕಾದ ಸಾರಿಗೆ ಮತ್ತು ಅನ್ಯ ಸವಲತ್ತು ಗಳಿಗೂ ಈ ಪ್ರದೇಶ ಎರವಾಗಿತ್ತು. ಇಡೀ ಭಾರತದಲ್ಲಿ ಬಂದರು ನಿರ್ಮಾಣಕ್ಕೆ ಅತ್ಯುತ್ತಮ ನಿವೇಶನವನ್ನು ಹೊಂದಿ ರುವ ಕಾರವಾರವು ಈ ಬಗ್ಗೆ ಹೇಳಕೇಳುವವರೇ ಇಲ್ಲವೆನ್ನುವಂತೆ ಇಂದಿಗೂ ಹಾಗೆಯೇ ಉಳಿದಿರಲು ಅಂದಿನ ಪರಿಸ್ಥಿತಿಯೇ ಕಾರಣ. ಉತ್ತರ ಕನ್ನಡಜಿಲ್ಲೆಯ ಒಂದು ತಾಲೂಕು ಕೇಂದ್ರ ದಿಂದ ಇನ್ನೊಂದು ಕೆಂದ್ರಕ್ಕೆ ಹೋಗಲು ಸರ್ವಋತು ಮಾರ್ಗ ಗಳೇ ಇರಲಿಲ್ಲ. ದಕ್ಷಿಣ ಕನ್ನಡದ ಕರಾವಳಿಯ ಉದ್ದಕ್ಕೂ ಇರುವ ಹಲವಾರು ನದಿಗಳಿಗೆ ಸೇತುವೆಗಳೇ ಇರಲಿಲ್ಲ. ಕೊಡಗು ಸಮೃದ್ಧ ಜಿಲ್ಲೆಯಾಗಿದ್ದರೂ ಅಲ್ಲಿ ಸಾರಿಗೆ ಸಂಪರ್ಕ ಅಷ್ಟ ಕ್ಕಷ್ಟೇ. ಮದ್ರಾಸ್ ರಾಜ್ಯದಲ್ಲಿ ಬಳ್ಳಾರಿ, ದಕ್ಷಿಣಕನ್ನಡಗಳಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಸಲ್ಲಬೇಕಾದ ಪಾಲು ಸಲ್ಲಲೇಇಲ್ಲ. ಮುಂಬೈರಾಜ್ಯದಲ್ಲಿರುವ ಕನ್ನಡ ಪ್ರದೇಶಗಳು ಒಂದಕ್ಕೊಂದು ತಗಲಿಕೊಂಡಾದರೂ ಇದ್ದವು. ಮದ್ರಾಸ್ ರಾಜ್ಯದಲ್ಲಿ ಅದೂ ಇಲ್ಲದೆ ಅಲ್ಲಿನ ಕನ್ನಡ ಜಿಲ್ಲೆಗಳು ಪರಸ್ಪರ ಸಂಪರ್ಕವಿಲ್ಲದ ವಾಗಿ ಏಕಾಂಗಿಗಳಾಗಿ ಇದ್ದವು. ವಿಜಾಪುರ ಜಿಲ್ಲೆಯ ಹಲವು

ಜಲಸಮೃದ್ಧ ನದಿಗಳ ನಾಡಾಗಿದ್ದರೂ ನೀರಾವರಿ ಸೌಕರ್ಯವಿಲ್ಲದೆ ಸದಾ ಬರಗಾಲದಿಂದ ಬೆಂಡಾಗುವ ದುಸ್ಥಿತಿಯಲ್ಲಿ ಇತ್ತು. ಇಡೀ ಹೈದರಾಬಾದ್ ಕರ್ನಾಟಕದಲ್ಲಿ ಸ್ವಾತಂತ್ರ್ಯಪೂರ್ವದಲ್ಲಿ ಕೇವಲ ನಾಲ್ಕು ಹೈಸ್ಕೂಲುಗಳು ಮಾತ್ರ ಇದ್ದುವೆಂದರೆ ಆ ಪ್ರದೇಶ ಎಷ್ಟು ಹಿಂದುಳಿದುದೆಂದು ಊಹಿಸಬಹುದು. ಇಂಥ ಹಿಂದುಳಿದ, ಬಡತನದ ಪ್ರದೇಶಗಳು ಇವಾದುದರಿಂದಲೇ ಈ ಭಾಗದ ಕನ್ನಡ ಮಹಿಳೆಯರು, ಬಡತನ ತಾಳಲಾರದೆ, ಉದರ ನಿರ್ವಾಹಕ್ಕೆ ಮಾರ್ಗಕಾಣದೆ ಮುಂಬೈ, ಪುಣೆಯಂಥ ನಗರಗಳ ಸೂಳೆಗೇರಿಗಳನ್ನು ತುಂಬುವಂಥ ಪರಿಸ್ಥಿತಿ, ಪರಂಪರೆ ಸೃಷ್ಟಿಯಾಯಿತು !

ಹೀಗಿತ್ತು ಕನ್ನಡದ ಒಡೆದ ಕನ್ನಡಿ. ಕನ್ನಡಿಗರಿಗೆ ಸ್ವತಂತ್ರ ಅಸ್ತಿತ್ವವೇ ಇರಲಿಲ್ಲ. ಕನ್ನಡಿಗನಿಗೆ ಸ್ವತಂತ್ರ ವ್ಯಕ್ತಿತ್ವವೇ ಇರಲಿಲ್ಲ ಉತ್ತರ ಭಾರತದಲ್ಲಿ ಕನ್ನಡಿಗ "ಮದ್ರಾಸಿ". ಮುಂಬೈಯಲ್ಲಿ ಅವನು ತಿರಸ್ಕರಣೀಯನಾದ "ಕಾನಡೀ ಅಪ್ಪಾ".

ಭವ್ಯ ಇತಿಹಾಸ, ಪರಂಪರೆ, ಸಂಸ್ಕೃತಿಗಳನ್ನು ಹೊಂದಿದ್ದ ಕರ್ನಾಟಕಕ್ಕೆ ಇಂಥ ಅವದೆಸೆ ಬಂದಿತ್ತು. ಕದಂಬ, ಗಂಗ, ಚಾಳುಕ್ಯ, ರಾಷ್ಟ್ರಕೂಟ, ಹೊಯ್ಸಳ, ವಿಜಯನಗರದಂಥ ವಿಜಯಶಾಲೀ ರಾಜಪರಂಪರೆಗಳನ್ನು ಹೊಂದಿದ್ದ, "ಕರ್ನಾಟ ಬಲಂ ಅಜೇಯ್ಯಂ". ಎಂದು ವರ್ಣಿಸಲ್ಪಟ್ಟ ಕನ್ನಡಿಗರ ಸೈನ್ಯವನ್ನು ಹೊಂದಿದ್ದ ಕರ್ನಾಟಕ ಮೂಲೆಪಾಲಾಗಿತ್ತು. "ಅಖಂಡಿತ ಪ್ರಸಾರೋಹಿ ಪುರುಷಕಾರಃ ಕರ್ಣಾಟಾನಾಮ್'' (ಕರ್ನಾಟಕದವನ ಪೌರುಷಕ್ಕೆ ಅಡೆತಡೆಯಿಲ್ಲ) ಎಂದೂ "ಕರ್ಣಾಟೋ ಯುದ್ಧತಂತ್ರೇ ಚತುರತರಮತಿಃ'' (ಯುದ್ಧದಲ್ಲಿ ಚತುರರನ್ನು

ಓಸರಿಸಿದವನು ಕರ್ನಾಟಕನು) ಎಂದೂ ರಾಜಶೇಖರನಂಥ ನಾಡ ಹೊರಗಿನ ವಿದ್ವಾಂಸರಿಂದ ಹೊಗಳಿಸಿಕೊಂಡಿದ್ದ ಕರ್ನಾಟಕ ಎಲ್ಲಿದೆ, ಎಂದು ಸಂಶಯ ಪಡುವಂತಾಗಿತ್ತು. 'ಕರ್ನಾಟಕ ಸಂಗೀತ' ಎಂಬುದು ಕರ್ನಾಟಕದ್ದಲ್ಲ. ಆ ಹೆಸರು ಸರಿಯಾದುದಲ್ಲ, ವಾಸ್ತವವಾಗಿ ಅದನ್ನು 'ದಕ್ಷಿಣಾದಿ ಸಂಗೀತ' ಎನ್ನಬೇಕು, ಎನ್ನುವ ಧೈರ್ಯ ಪರಪ್ರಾಂತದವರಿಗೆ ಬರುವಷ್ಟು ದೀನರು ಕನ್ನಡಿಗರಾಗಿದ್ದರು.

ಬಂಗಾಳದಲ್ಲಿ ಆಳಿದ ಖ್ಯಾತ ಸೇನವಂಶದ ರಾಜರು ತಾವು ಕರ್ನಾಟ ಕ್ಷತ್ರಿಯರೆಂದೂ ಮಿಥಿಲೆಯಿಂದ ಆಳಿ ನೇಪಾಳವನ್ನು ಗೆದ್ದುಕೊಂಡ ನಾನ್ಯದೇವನ ವಂಶಜರು ತಾವು ಕರ್ನಾಟವಂಶದವರೆಂದೂ ಹೆಮ್ಮೆಯಿಂದ ಹೇಳಿಕೊಂಡಿದ್ದರೆ, ಕರ್ನಾಟಕದ ಜನಕ್ಕೇ ಈ ತಿಳುವಳಿಕೆ ಉಳಿದಿರಲಿಲ್ಲ. 'ಕರ್ನಾಟಕರತ್ನ ಸಿಂಹಾಸನಾಧೀಶ್ವರ'ರು ತಾವೆಂದು ವಿಜಯನಗರದ ಅರಸರು ಹೇಳಿಕೊಂಡಿದ್ದರೂ 'ಕನ್ನಡರಾಯ'ರು ತಾವೆಂದು ಅವರು ತಮ್ಮನ್ನು ಕರೆದುಕೊಂಡಿದ್ದರೂ ಪರಪ್ರಾಂತೀಯರು ಇದು ತಾವು ಸ್ಥಾಪಿಸಿದ ರಾಜ್ಯವೆಂದು ಹೇಳಿದಾಗ ಅದಕ್ಕೆ ಉತ್ತರ ಕೊಡಲಾರದ ಅಜ್ಞಾನದಲ್ಲಿ ಕನ್ನಡಿಗರು ಮುಳುಗಿಹೋಗಿದ್ದರು. ಪುಲಿಕೇಶಿ, ನೃಪತುಂಗ, ಕೃಷ್ಣದೇವರಾಯನಂಥ ರಾಜರೂ, ಬಸವ, ಮಧ್ವ, ವಿದ್ಯಾರಣ್ಯರಂಥ ಸಂತರೂ ಸರ್ವಸಿದ್ಧಿ ಆಚಾರಿ, ಚಾವಣ, ದಾಸೋಜನಂಥ ಶಿಲ್ಪಿಗಳೂ, ಪುರಂದರ, ಪುಂಡರೀಕ ವಿಠಲನಂಥ ಸಂಗೀತಜ್ಞರೂ, ರನ್ನ, ಪಂಪ, ಕುಮಾರ ವ್ಯಾಸರಂಥ ಕವಿಗಳೂ ಬಾದಾಮಿ, ಐಹೊಳೆ, ಹಂಪೆ, ಹಳೇಬೀಡಿನಂಥ ಕಲಾಕೇಂದ್ರಗಳೂ ತಮ್ಮ ಪರಂಪರೆಗೆ ಸೇರಿದವು

ಗಳೆಂಬ ಅರಿವಾಗಲೀ ಅಭಿಮಾನವಾಗಲೀ ಕನ್ನಡಿಗರಿಗೆ ಇರಲಿಲ್ಲ.

ಇದಲ್ಲದೆ ಈಗ ಮಹಾರಾಷ್ಟ್ರವೆಂದು ಪರಿಚಿತವಾಗಿರುವ ನೆಲದ ಬಹುಭಾಗ ಹಿಂದೆ ಕನ್ನಡದ್ದೇ ಆಗಿತ್ತೆಂದೂ ಅವರು ತಿಳಿಯರು. ಶಿವಾಜಿ ಹುಟ್ಟಿದ ಸ್ಥಳ ಶಿವನೇರಿ ಕನ್ನಡದ 'ಶಿವನವರಿ'; ದೇವಲಾಲಿ ಎಂಬ ಈಗಿನ ನಾಸಿಕ ಜಿಲ್ಲೆಯ ಊರು ಶಾಸನಗಳ 'ದೇವಳಹಳ್ಳಿ'; ಕೊಂಕಣದ ವಾಲಾವಾಲ್ ಶಾಸನವೊಂದರಲ್ಲಿ ಬಳ್ಳಾವಳ್ಳಿ ಎಂದಿದೆ. ಹೀಗೆ ಹಿಂದೆ ಕನ್ನಡ ನೆಲವಾಗಿತ್ತೆಂದು ಸೂಚಿಸುವ ಸ್ಥಳನಾಮಗಳು ಇಂದಿನ ಮಹಾರಾಷ್ಟ್ರದಲ್ಲಿ ಉದ್ದಕ್ಕೂ ಇವೆ. ಕನ್ನಡಿಗರಿಗೆ ಇದು ತಿಳಿಯದು.

ಈ ಶತಮಾನದ ಆರಂಭಕ್ಕೆ ಕರ್ನಾಟಕವೇ ಆಗಲೀ ಕರ್ನಾಟಕತ್ವವೇ ಆಗಲೀ ಅಸ್ತಿತ್ವದಲ್ಲೇ ಇರಲಿಲ್ಲ. ಈ ಶತಮಾನದ ಆರಂಭದ ದಶಕದಲ್ಲಿ ವಂಗಭಂಗವಾಗಿ ದೇಶದಲ್ಲಿ ಉಗ್ರ ಸ್ವದೇಶೀ ಚಳವಳಿ ನಡೆದು, ಬಂಗಾಳ, ಪಂಜಾಬ್, ಮಹಾರಾಷ್ಟ್ರದಂಥ ಪ್ರಾಂತಗಳು ತಮ್ಮದೇ ನಾಯಕರನ್ನು ಹೊಂದಿ ಚಳವಳಿಯಲ್ಲಿ ಧುಮ್ಮಿಕ್ಕಿದಾಗ ಕರ್ನಾಟಕವಿನ್ನೂ ನಿದ್ರಾವಸ್ಥೆಯಲ್ಲೇ ಇತ್ತು. "ಛೀ, ಕರ್ನಾಟಕವೆಲ್ಲಿದೆ? ಕರ್ನಾಟಕವು ಜಗತ್ತಿಗೆ ನಾಟ್ಯರಂಗದಿಂದ ಎಂದೋ ನಾಮಶೇಷವಾಗಿಹೋಗಿದೆ! ಇನ್ನು ಎಲ್ಲಿಯ ಕರ್ನಾಟಕ?" ಎಂಬುದು ಆಗಿನ ಸಹಜ ಉದ್ಗಾರವಾಗಿತ್ತು.

2

"ದಕ್ಷಿಣ ಭಾರತದ ಬಹುಭಾಗವನ್ನೆಲ್ಲ ವ್ಯಾಪಿಸಿ ಉತ್ತರ ಭಾರತದ ನಾನಾ ಭಾಗಗಳಲ್ಲೂ ತನ್ನ ಪ್ರತಿಭೆಯನ್ನು ಬೀರಿದ್ದ

ಕರ್ನಾಟಕವು ಈಗ ಒಡೆದು ಚೂರುಚೂರಾಗಿದೆ. ಕರ್ನಾಟಕದ ಅಸ್ತಿತ್ವವೇ ಅಳಿಸಿಹೋದಂತಾಗಿದೆ. ಒಂದು ಕಡೆ ಕನ್ನಡಿಗರು ಮರಾಟರ ಪ್ರಾಬಲ್ಯಕ್ಕೆ ಸಿಕ್ಕಿ ತಾವು ಕನ್ನಡಿಗರೆಂಬುದನ್ನೇ ಮರೆಯುತ್ತ ಬಂದಿದ್ದಾರೆ; ಏಕೆ, ಅಚ್ಚ ಕನ್ನಡಿಗರ ಮನೆಗಳಲ್ಲಿ ಕನ್ನಡಕ್ಕಿಂತ ಮರಾಟಿ ಭಾಷೆಯ ಬಳಕೆಯೇ ಹೆಚ್ಚಾಗುತ್ತಿದೆ. ಇನ್ನೊಂದು ಕಡೆ ನಿಜಾಮರಾಜ್ಯದಲ್ಲಿ ಮುಸಲ್ಮಾನರ ಆಡಳಿತಕ್ಕೆ ಸಿಕ್ಕಿ ಕನ್ನಡಿಗರು ಉರ್ದುಭಾಷೆಯನ್ನೇ ಹೆಚ್ಚುಹೆಚ್ಚಾಗಿ ಕಲಿಯುತ್ತ ಬಂದಿದ್ದಾರೆ. ಪೂರ್ವಕ್ಕೆ ದಕ್ಷಿಣಕ್ಕೆ ತೆಲುಗರು ತಮಿಳರು ತಮ್ಮ ಪ್ರಭಾವವನ್ನು ಬೀರಿ ಕನ್ನಡಿಗರು ತಮ್ಮ ವ್ಯಕ್ತಿತ್ವವನ್ನೇ ಮರೆಯುವಂತೆ ಮಾಡಿದ್ದಾರೆ. ಅಚ್ಚ ಕನ್ನಡ ದೇಶವಾದ ಮೈಸೂರಿನಲ್ಲಿ ಜನರು ತೃಪ್ತರಾಗಿ ತಮ್ಮ ಹಿತಚಿಂತನೆಯನ್ನು ಮಾತ್ರ ಮಾಡುತ್ತಿದ್ದಾರೆ. ಒಟ್ಟಿನಲ್ಲಿ ಕನ್ನಡಿಗರಿಗೆ ಕರ್ನಾಟಕದ ಪ್ರಜ್ಞೆಯೇ ಇಲ್ಲ; ತಾವು ಕಳೆದುಕೊಂಡಿರುವ ಭಾಗದ ಪರಿವೆಯೇ ಇಲ್ಲ. ಯಾವುದೋ ವಿಚಿತ್ರವಾದ ಜಡತೆ, ನಿಶ್ಚೇಷ್ಟತೆ, ಕನ್ನಡಿಗರ ಮನವನ್ನಾವರಿಸಿ ತಮ್ಮ ನಾಡಿಗಾಗಿ, ಪ್ರಾಚೀನ ಕಾಲದಿಂದ ಬೆಳೆದುಬಂದ ತಮ್ಮ ಸಂಸ್ಕೃತಿಗಾಗಿ ಹೊಡೆದಾಡಬೇಕೆಂಬ ಆಸೆಯೇ ಇಲ್ಲದಂತೆ ಮಾಡಿದೆ. ಹಾಗಿಲ್ಲದಿದ್ದರೆ, ವಂಗ ವಿಭಜನೆಯ ವಿರುದ್ಧ ಹೂಡಿದ ಚಳುವಳಿಗಿಂತ ಕನ್ನಡಿಗರ ಚಳುವಳಿ ಎಷ್ಟು ಹಿಂದೆಯೇ ಪ್ರಾರಂಭವಾಗಬೇಕಿತ್ತು, ಎಷ್ಟು ಉಗ್ರವಾಗಬೇಕಿತ್ತು ?'' ಡಾ॥ ಎಂ. ವಿ. ಕೃಷ್ಣರಾಯರ ಉದ್ಗಾರ ಅಂದಿನ ಪರಿಸ್ಥಿತಿಯ ಸ್ಪಷ್ಟ ಚಿತ್ರಣ ನೀಡುತ್ತದೆ.

ಮುಂಬೈ ಕರ್ನಾಟಕದಲ್ಲಿ ಮರಾಠಿ ಶಾಲೆಗಳನ್ನಷ್ಟೇ ಸ್ಥಾಪಿಸಿ ಜನಸಾಮಾನ್ಯರ ಭಾಷೆಯನ್ನು ಮೂಲೆ ಗುಂಪು

ಮಾಡಿದ್ದರ ವಿರುದ್ಧ ಧಾರವಾಡ ವಿಭಾಗದ ಆಂಗ್ಲ ಅಸಿಸ್ಟಂಟ್ ಕಲೆಕ್ಟರ್ ವಾಲ್ಟರ್ ಎಲಿಯಟ್ 1826ರಲ್ಲಿ ತನ್ನ ಅಸಮಾಧಾನ ಸೂಚಿಸಿದ್ದನು. ಅಲ್ಲದೆ 1831ರಲ್ಲಿ ಧಾರವಾಡದಲ್ಲಿ ಒಂದು ಕನ್ನಡ ಶಾಲೆಯನ್ನು ಸ್ಥಾಪಿಸಿ ತಾನೇ ಮೂರು ವರ್ಷಗಳವರೆಗೆ ಅದರ ಖರ್ಚನ್ನು ನಿರ್ವಹಿಸಿದ್ದನು. ಮುಂದೆ ಈ ಭಾಗದಲ್ಲಿ ಶಾಲೆಗಳ ಇನ್ಸ್‌ಪೆಕ್ಟರ್ ಆಗಿ ಬಂದ ರಸ್ಸೆಲ್ ಎಂಬ ಅಧಿಕಾರಿಯು ಕಾಲಕ್ಕೆ (1864ರಿಂದ ಮುಂದೆ) ಕನ್ನಡ ಶಾಲೆಗಳ ಹೆಚ್ಚಳ, ಕನ್ನಡ ಪಠ್ಯಪುಸ್ತಕಗಳ ಪ್ರಕಟಣೆಗೆ ಕ್ರಮ ಕೈಕೊಳ್ಳಲಾಯಿತು. ಆರಂಭದ ಪುಸ್ತಕಗಳು ಮರಾಠಿಯಿಂದ ಅನುವಾದವಾದವುಗಳೇ ಆದರೂ 1880ರ ನಂತರ ಸ್ವತಂತ್ರ ಕನ್ನಡ ಪಠ್ಯಪುಸ್ತಕಗಳ ಪ್ರಕಟಣೆ ಆರಂಭ ಆಯಿತು. ಮುಂದೆ ಡೆಪ್ಯುಟಿ ಚನ್ನಬಸಪ್ಪ, ವೆಂಕಟ ರಂಗೋ ಕಟ್ಟಿ, ಶಾಂತವೀರ ಕಿತ್ತೂರ, ಧೋಂಡೋ ಮುಳಬಾಗಲ್ ಮುಂತಾದವರು ಕನ್ನಡ ಶಿಕ್ಷಣದ ಪ್ರಸಾರಕ್ಕೆ ಶ್ರಮಿಸಿದರು. 1890ರಲ್ಲಿ ರಾ. ಹ. ದೇಶಪಾಂಡೆಯವರೇ ಮುಂತಾದವರು ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ಧಾರವಾಡದಲ್ಲಿ ಸ್ಥಾಪಿಸಿದರು. ಇಷ್ಟೆಲ್ಲ ಆಗಿದ್ದರೂ ಕರ್ನಾಟಕತತ್ವದ ಜಾಗೃತಿಗೆ ಆಗಬೇಕಾದುದೆಲ್ಲ ಆಗಿರಲಿಲ್ಲ. ಮೈಸೂರಲ್ಲಿ ಮಹಾರಾಜರ ಪ್ರೋತ್ಸಾಹದಿಂದ ಕನ್ನಡ ಶಾಲೆಗಳ ಸ್ಥಾಪನೆ, ಗ್ರಂಥಗಳ ಪ್ರಕಟಣೆ, ಮುದ್ರಣಗಳಿಗೆ ಸಾಕಷ್ಟು ಬೆಂಬಲ ದೊರೆಯಿತು. ಆದರೆ ಮಹಾರಾಜರ ಸತತ ಪ್ರೋತ್ಸಾಹದಿಂದಾಗಿ ಆ ಭಾಗದ ಜನರಿಗೆ ತಾವು ಏನನ್ನಾದರೂ ಕಳೆದುಕೊಂಡಿದ್ದೇವೆಂಬ ಭಾವನೆ ಇರಲಿಲ್ಲ. ನಮ್ಮವರೇ ಆದ ಮಹಾರಾಜರಿದ್ದಾರೆಂಬ ಸಂತೃಪ್ತ ಭಾವನೆ ಇತ್ತು. ಹೀಗೆ ವಿಶಿಷ್ಟ ಐತಿಹಾಸಿಕ ಹಿನ್ನೆಲೆಯಿಂದಾಗಿ

ಧಾರವಾಡದೇ ಈ ಜಾಗರಣ ಚಳವಳಿಯ ಉಗಮ ಸ್ಥಾನವಾಗಬೇಕಾಯಿತು. ಏಕೆಂದರೆ ಆಗ ದುಃಸ್ಥಿತಿಗೆ ಒಳಗಾಗಿದ್ದ ಸಾಕಷ್ಟು ವಿಶಾಲವಾದ ಕನ್ನಡ ಪ್ರದೇಶಕ್ಕೆ ಧಾರವಾಡವು ಕೇಂದ್ರ ಸ್ಥಾನವಾಗಿತ್ತು. ಶಾಂಕರ, ವೀರಶೈವ, ಮಾಧ್ವ ಪಂಥಗಳ ಚಟುವಟಿಕೆಯ ಕೇಂದ್ರವೂ ಆಗಿದ್ದು ಆಯಾ ಸಂಪ್ರದಾಯಗಳ ಧಾರ್ಮಿಕ ಚಟುವಟಿಕೆಗಳ ಹೆಚ್ಚಳದಿಂದಾಗಿ ಜನರಲ್ಲಿ ಬೌದ್ಧಿಕ ಜಾಗೃತಿ ಧಾರವಾಡದಲ್ಲಿ ಇತ್ತು. ಮೈಸೂರಲ್ಲಿ ಕನ್ನಡ "ಕಳೆದು ಹೋಗಿರಲಿಲ್ಲ". ಮಹಾರಾಜರ ಬೆಂಬಲ ಅದಕ್ಕಿತ್ತು. 1886ರಲ್ಲಿ ಕರ್ನಾಟಕ ಭಾಷೋಜ್ಜೀವಿನೀ ಸಭೆಯಂಥ ಸಂಸ್ಥೆಯ ಸ್ಥಾಪನೆಯನ್ನು ಮಹಾರಾಜರೇ ಮಾಡಿದ್ದರು. ಆದರೆ ತಾವು ಈ ಬಗ್ಗೆ ಮಾಡಬೇಕಾದದ್ದು ಏನೋ ಇದೆಯೆಂದು ಜನರಿಗೆ ಅನಿಸುವ ವಾತಾವರಣ ಆಗ ಇರಲಿಲ್ಲ. ಇದರಿಂದಾಗಿ ರಾಷ್ಟ್ರೀಯ ಜಾಗೃತಿ, ರಾಜಕೀಯ ಜಾಗೃತಿಗಳೂ ಸಂಸ್ಥಾನದಲ್ಲಿ ತೀರ ನಿಧಾನವಾಗಿ ಬಂದವುಗಳು. ಸಂಸ್ಥಾನದಲ್ಲಿನ ಬುದ್ಧಿಜೀವಿಗಳ ಒಂದು ವರ್ಗ, ಹೊರಗೆ ಬ್ರಿಟಿಷ್ ಪ್ರಾಂತಗಳಲ್ಲಿ ನಡೆಯುತ್ತಿದ್ದ ಚಳವಳಿಯ–ಯುದ್ಧದ–ರಮ್ಯ ವಾರ್ತೆಗಳನ್ನು ಕೇಳಿ ತಮಗೆ ಸರಿಕಂಡ ಪಕ್ಷ ವಹಿಸಿ ಅಭಿಪ್ರಾಯ ನೀಡಿ ಕಾಲ ಕಳೆಯುವುದಷ್ಟೇ ಆಗ ನಡೆದಿತ್ತು. ಇದು ಹೆಚ್ಚು ಕಡಿಮೆ 1920ರ ವರೆಗಿನ ಸ್ಥಿತಿ.

ಇಡೀ ದೇಶದಲ್ಲಿ ಸ್ವದೇಶೀ ಚಳವಳಿಯು ಉಗ್ರವಾಗಿ ನಡೆಯುತ್ತಿರಲಾಗಿ, ಕನ್ನಡಿಗರು, ವಿಶೇಷತಃ ಬ್ರಿಟಿಷ್ ಪ್ರಾಂತಗಳಲ್ಲೇ ಇರುವ ಕನ್ನಡಿಗರು ಬಹುಮಟ್ಟಿಗೆ ತೆಪ್ಪಗೇ ಇದ್ದರು. ವಂಗಭಂಗದ ಕಾಲಕ್ಕೆ ಬೆಳಗಾವಿಯಲ್ಲಿ ಅಲ್ಪಸ್ವಲ್ಪವಾಗಿ ಕಾಣಿಸಿ

ಕೊಂಡ ಚಟುವಟಿಕೆಯು ವಿನಾ ಉಳಿದೆಲ್ಲಿ ಬ್ರಿಟಿಶ್ ಕರ್ನಾಟಕದಲ್ಲಿ ಯಾವೊಂದು ವಿಶೇಷ ಚಟುವಟಿಕೆಯೂ ಕಾಣಿಸಲಿಲ್ಲ. ಇದಕ್ಕೆ ಕಾರಣವೇನು? ಸ್ವಾಭಿಮಾನದ ಅಭಾವವೇ ಇದಕ್ಕೆ ಕಾರಣವಾಗಿತ್ತು. ಪ್ರಾಂತೀಯ ಅಥವಾ ರಾಷ್ಟ್ರೀಯ ಅಭಿಮಾನ ಈ ಭಾಗದ ಜನರಲ್ಲಿ ಇರಲಿಲ್ಲ. ಸಹಜವಾಗಿ ಇರಬೇಕಾಗಿದ್ದ ಭಾಷಾಭಿಮಾನವು ವ್ಯಾಪಕವಾಗಿ ಇರಲಿಲ್ಲ. "ಕರ್ನಾಟಕತ್ವ" ಎಂದು ಆಲೂರು ವೆಂಕಟರಾಯರು ಬಣ್ಣಿಸಿದ (ನುಡಿ, ನಾಡುಗಳ ಅಭಿಮಾನದ ಅಂಶಗಳನ್ನು ಒಳಗೊಂಡಿರುವ ಕಲ್ಪನೆಯೇ ಈ ಕರ್ನಾಟಕತ್ವ) ಎಳ್ಳಷ್ಟೂ ಕಾಣಿಸುವಂಥದ್ದಾಗಿರಲಿಲ್ಲ. ಅಂದಿದ್ದುದು ಒಂದು ವಿಧದ ಆತ್ಮವಿಸ್ಮೃತಿಯ ಸ್ಥಿತಿ. ತಾವು ಯಾರು, ತಮ್ಮ ಪರಂಪರೆಯೇನು ಎಂದು ತಿಳಿಯದೇ ಇದ್ದ ಅಂಧಕಾರ. "ಹಿಂದೂಸ್ಥಾನದಲ್ಲಿಯ ಪ್ರತಿಯೊಂದು ಭಾಷೆಯಾದರೋ ತಮ್ಮ ಪೂರ್ವಜರ ಇತಿಹಾಸವನ್ನು ಉತ್ಸಾಹದಿಂದ ಸಂಶೋಧಿಸುತ್ತಿರಲು, ಕರ್ನಾಟಕವು ಮಾತ್ರ ಇನ್ನೂ ಕುಂಭಕರ್ಣನ ನಿದ್ರೆಯಲ್ಲಿಯೇ ಇದೆ... ಇದಕ್ಕೆ ನಮ್ಮ ಇತಿಹಾಸ ಜ್ಞಾನದ ಅಭಾವವೇ ಮೂಲ ಕಾರಣ'' ಎಂದು ಈ ಕುರಿತು ಆಲೂರು ವೆಂಕಟರಾಯರು ಸರಿಯಾಗಿ ಕಾರಣ ಮೀಮಾಂಸೆ ಮಾಡಿದ್ದು ''ನಮ್ಮಲ್ಲಿ ಬಲಾಢ್ಯರಾದ ಅರಸರಿರಲಿಲ್ಲ; ನಮ್ಮಲ್ಲಿ ಘನ ಪಂಡಿತರಿರಲಿಲ್ಲ. ನಾವು ಎಂದಿಗೂ ಹೇಡಿಗಳೇ ಎಂದಿಗೂ ದಡ್ಡರೇ, ಅಂದ ಬಳಿಕ ಮುಂದಿನ ಆಶೆಯಾದರೂ ನಮಗೆಲ್ಲಿಯದು?'' ಎಂಬ ಭಾವನೆಯನ್ನು ಕನ್ನಡಿಗರು ಹೊಂದಿದ್ದರೆಂದು ಅವರು ವಿವರಿಸಿದ್ದಾರೆ. ''ಪೂರ್ವಜರ ಅಭಿಮಾನವೇ ಇಲ್ಲದಂತಹವರು ತಮ್ಮ ಜನರಲ್ಲಿ ರಾಷ್ಟ್ರೀಯತ್ವದ ಭಾವನೆಯನ್ನು ಬಿತ್ತುವುದೆಂತು?

ಇಂತಹ ಜನರಲ್ಲಿ ರಾಷ್ಟ್ರಾಭಿಮಾನವು ಎಂದಾದರೂ ಮೊಳೆ ದೋರುವುದೋ ?" ಎಂದು ಕರ್ನಾಟಕತ್ವದ ಜಾಗೃತಿಯ ಐತಿಹಾಸಿಕ ಅವಶ್ಯಕತೆಯನ್ನು ಆಲೂರರು ಎತ್ತಿ ಹೇಳಿದ್ದಾರೆ.

1906–07ರ ಅವಧಿಯಲ್ಲಿ ಸ್ವದೇಶೀ ಚಳವಳಿಯು ಮುಖ್ಯವಾಗಿ ಮೂರು ಪ್ರಾಂತಗಳಲ್ಲಿ ಉಗ್ರವಾಗಿತ್ತು. ಲಾಲ, ಬಾಲ ಮತ್ತು ಪಾಲ ಎಂಬ ತ್ರಿಮೂರ್ತಿಗಳು ಇದರ ನಾಯಕ ರಾಗಿ ಖ್ಯಾತರಾಗಿದ್ದರು. ಲಾಲ ಎಂದರೆ ಲಾಲಾ ಲಜಪತ ರಾಯ್ ಇವರು ಪಂಜಾಬಿನವರು. ಅದೇ ಅರ್ಧ ಶತಮಾನದ ಹಿಂದೆ ಆಗಿಹೋದ ಪಂಜಾಬಿನ ರಣಜೀತಸಿಂಗನ ಹಾಗೂ ಅವನ ಸಂತತಿಯವರ ಧೀರತೆ, ಪರಾಕ್ರಮಗಳ ಇತಿಹಾಸ ಪಂಜಾಬಿನ ಜನಮನದಲ್ಲಿ ಹಸುರಾಗಿತ್ತು. ಗುರು ನಾನಕ, ಗುರುಗೋವಿಂದ ನಂಥ ಸಂತರ ನೆನಪು, ತೇಗಬಹಾದೂರ ಮತ್ತು ಗುರು ಗೋವಿಂದನ ಮಕ್ಕಳ ಧೀರ ಹೌತಾತ್ಮ್ಯದ ನೆನಪು ಅವರಲ್ಲಿ ಜಾಗೃತವಾಗಿತ್ತು. ತಮ್ಮ ಪರಂಪರೆಯನ್ನು ಅವರಿಗೆ ನೆನಪು ಮಾಡಿಕೊಡಲು ಆರ್ಯ ಸಮಾಜದಂಥ ಧಾರ್ಮಿಕ ಚಳವಳಿಯು ಪಂಜಾಬಿನಲ್ಲಿ ನಡೆಸಿದ ಚಟುವಟಿಕೆಯೂ ನೆರವಾಗಿತ್ತು. ಪಂಜಾಬಿನ ಜನ ತಮ್ಮ ಹಿಂದಿನ ಭವ್ಯ ಪರಂಪರೆಯನ್ನು ನೆನೆದು ಇಂದಿನ ತಮ್ಮ ಗುಲಾಗಿರಿಯ ಸ್ಥಿತಿಯ ಬಗ್ಗೆ ಉತ್ಕಟ ವಾಗಿ ಚಿಂತೆಗೆ ಈಡಾಗಿದ್ದರು.

ಬಂಗಾಳದಲ್ಲಿ ಕೂಡ ಆ ಪ್ರಾಂತದಲ್ಲಿ 19ನೆಯ ಶತಮಾನದ ಆರಂಭದಿಂದಲೂ ಹರಡಿದ ನವಶಿಕ್ಷಣದಿಂದಲೂ ರಾಜಾರಾಮಮೋಹನರವರಂಥ ನಾಯಕರು ನಡೆಸಿದ ಧಾರ್ಮಿಕ, ಸಾಮಾಜಿಕ ಚಳವಳಿಯಿಂದಲೂ ಅಪಾರ ಜಾಗೃತಿಯಾಗಿತ್ತು.

ತಮ್ಮ ಪ್ರಾಂತದಲ್ಲಿ ಪಾಲ, ಸೇನರಂಥ ಗಣ್ಯ ರಾಜವಂಶಗಳು ಆಳಿದ್ದುವೆಂದೂ ಕಲೆ, ಸಾಹಿತ್ಯ, ಧರ್ಮಗಳಿಗೆ ಅವು ಅಪಾರ ಕಾಣಿಕೆ ನೀಡಿದ್ದುವೆಂದೂ ಅವರಿಗೆ ತಿಳಿದುಬಂದಿತ್ತು. ಚೈತನ್ಯರಂಥ ಸಂತರು ನಡೆಸಿದ ಅಪಾರ ಧಾರ್ಮಿಕ ಜಾಗೃತಿಯ ಅರಿವು ಅವರನ್ನು ರೋಮಾಂಚನಗೊಳಿಸಿತ್ತು. ತಾಮ್ರಲಿಪ್ತಿಯಂಥ ತಮ್ಮ ಬಂದರು ಭಾರತದ ಹೆಬ್ಬಾಗಿಲಾಗಿತ್ತೆಂದೂ ದೇಶವಿದೇಶಗಳ ಜೊತೆ ಬಂಗಾಲಿಗಳು ವಾಣಿಜ್ಯ ವ್ಯವಹಾರ ನಡೆಸಿದ್ದರೆಂದೂ ವಿದೇಶಗಳಲ್ಲಿ ವಸಾಹತುಗಳನ್ನು ಸ್ಥಾಪಿಸಿದ್ದರೆಂದೂ ಅವರು ಕಂಡುಕೊಂಡಿದ್ದರು. ಇದು ವಂಗದೇಶದ ಜಾಗೃತಿಗೆ ಕಾರಣವಾಗಿತ್ತು. ಬಿಪಿನ್‌ಚಂದ್ರಪಾಲರ ನಾಯಕತ್ವ ಅವರಿಗೆ ದೊರಕಿತ್ತು. ವಂಗಪ್ರಾಂತದ ವಿಭಜನೆಯಂತೂ ಅವರನ್ನು ಅಸಾಧಾರಣವಾಗಿ ಕೆರಳಿಸಿತ್ತು.

ಬಾಲ ಎಂದರೆ ಬಾಳ ಗಂಗಾಧರ ಟಿಳಕರು ಮಹಾರಾಷ್ಟ್ರದವರು 1818ರಲ್ಲಷ್ಟೇ ಕೊನೆಗೊಂಡ ಮರಾಠಾ ಸತ್ತೆಯಾದ ಪೇಶ್ವಾಯಿಯ ನೆನಪು ಮಹಾರಾಷ್ಟ್ರದಲ್ಲಿ ಇನ್ನೂ ದೃಢವಾಗಿತ್ತು. ಮುಘಲ್ ಸತ್ತೆಯನ್ನೂ ತಮ್ಮ ಅಧೀನವಾಗಿ ಮಾಡಿಕೊಂಡ, ವಾಯುವ್ಯ ಭಾರತದ ಅಟಕ್ ನದಿಯವರೆಗೂ ವಿಜಯಯಾತ್ರೆ ಕೈಕೊಂಡ ಇತಿಹಾಸ ತಮ್ಮದು, ಶಿವಾಜಿ, ಬಾಜೀರಾಯನಂಥ ವೀರರು, ಜ್ಞಾನದೇವ, ತುಕಾರಾಮ, ಸಮರ್ಥರಂಥ ಸಂತರು ಜನಿಸಿದ ನಾಡು ತಮ್ಮದೆಂಬ ತಿಳಿವು ಮರಾಠಿಗರಿಗಿತ್ತು. ಇಂಥ ಹಿನ್ನೆಲೆಯಲ್ಲಿ ಪರಕೀಯರ ವಿರುದ್ಧ ಹೋರಾಟಕ್ಕೆ ಟಿಳಕರು 'ಕೇಸರಿ' ಪತ್ರಿಕೆಯ ಮೂಲಕ ಮಾಡಿದ ರಣಘರ್ಜನೆ ಮರಾಠಿಗರನ್ನು ಹುರಿದುಂಬಿಸಿತ್ತು.

ಹೀಗೆ ಈ ಮೂರು ಪ್ರಾಂತಗಳ ಜನರಿಗೆ ತಮ್ಮ ಪ್ರಾಚೀನ ಇತಿಹಾಸದ ತಿಳಿವು ಚೆನ್ನಾಗಿ ಇದ್ದುದರಿಂದ ಸ್ವಾತಂತ್ರ್ಯನಷ್ಟದಿಂದ ಆದ ನಿಜವಾದ ನಷ್ಟವೇನೆಂದು ಮನವರಿಕೆ ಅವರಿಗೆ ಆಗಿತ್ತು. ಆ ಪ್ರಾಚೀನ ವೈಭವದ ಪುನಾರಚನೆ ಆಗಬೇಕಾದರೆ ಮತ್ತೆ ದೇಶವು ಸ್ವತಂತ್ರವಾಗಬೇಕೆಂದು ಅವರು ನಂಬಿ ಅದರಂತೆ ಕಾರ್ಯರತರಾಗಿದ್ದರು. ಹೀಗೆ ರಾಷ್ಟ್ರೀಯತ್ವದ ಜಾಗೃತಿಗೆ ಪ್ರಾಂತಾಭಿಮಾನದ ಜಾಗೃತಿ ಅನಿವಾರ್ಯವೆಂದು ಆಲೂರರಂಥ ಪ್ರಾಂತಧರ್ಮದೃಷ್ಟಾರರಿಗೆ ಮನವರಿಕೆಯಾಯಿತು. ಅವರು ಪುಣೆಯಲ್ಲಿ ಇದ್ದು, ಆ ಕಾಲದಲ್ಲಿ ಟಿಳಕ, ಗೋಖಲೆಯವರಂಥ ರಾಷ್ಟ್ರೀಯ ಧುರೀಣರ ಭಾಷಣಗಳಿಂದ ಪ್ರಭಾವಿತರಾಗಿದ್ದರು. ವಂಗಭಂಗದ ಕಾಲಕ್ಕೆ ಮಹಾರಾಷ್ಟ್ರದ ಜನ ತೋರಿದ ಉತ್ಸಾಹ, ನಡೆಸಿದ ಉಗ್ರ ಚಳವಳಿಗಳನ್ನು ಕಣ್ಣಾರೆಕಂಡ ಅವರು ಕನ್ನಡಿಗರ ಅಕರ್ಮಣ್ಯತೆಗೆ ಕಾರಣವೇನೆಂದು ತುಂಬಾ ಯೋಚಿಸಿ ಒಂದು ನಿರ್ಧಾರಕ್ಕೆ ಬಂದಿದ್ದರು. "ರಾಷ್ಟ್ರೀಯತ್ವವು ಪೂರ್ಣವಾಗಿ ನೆಲೆಗೊಳ್ಳುವುದಕ್ಕೆ ಆಯಾ ಪ್ರಾಂತದ ಜನರು ಮೊದಲು ತಮ್ಮ ಮಹಾಪುರುಷರ ವೈಭವವನ್ನು ಸ್ಮರಿಸಿ, ತಮ್ಮ ಮನಸ್ಸನ್ನು ಆನಂದಸಾಗರದಲ್ಲಿ ಎಡೆಬಿಡದೆ ಓಲಾಡಿಸಬೇಕು. ಅವರ ಮೂರ್ತಿಗಳನ್ನು ತಮ್ಮ ಕಣ್ಣಮುಂದಿಟ್ಟುಕೊಂಡು ಧ್ಯಾನಿಸಬೇಕು," ಎಂದು ತಮಗಾದ ಅರಿವನ್ನು ಅವರು ಒತ್ತಿ ಹೇಳಿದ್ದಾರೆ.

1905ರಲ್ಲಿ ಅಕಸ್ಮಾತ್ ಆನೆಗೊಂದಿಯಲ್ಲಿರುವ ಮಾಧ್ವ ಯತಿಗಳ ನವವೃಂದಾವನದ ದರ್ಶನಕ್ಕೆ ತಾವು ಹೋಗಿದ್ದಾಗ ಪಕ್ಕದಲ್ಲೇ ಇದ್ದ, ಮರೆತ ಸಾಮ್ರಾಜ್ಯದ ರಾಜಧಾನಿ ಹಾಳು

ಹಂಪೆಯೆನಿಸಿದ್ದ ವಿಜಯನಗರವನ್ನು ಕಂಡು, ಅದು ಕರ್ನಾಟಕ ದಲ್ಲೇ ಇದೆಯೆಂದು ತಿಳಿದಾಗ ಅವರಿಗೆ ಅಚ್ಚರಿಯೂ ಆನಂದವೂ ಆಯಿತು. "ವಿಜಯನಗರದ ಇತಿಹಾಸವು ಆಗ ನಮಗೆ ಆಧುನಿಕ ಇತಿಹಾಸವಾಗಿರದೆ, ರಾಮಾಯಣ ಮಹಾ ಭಾರತವ ಕಥೆಗಳಂತೆ ಪೌರಾಣಿಕ ಇತಿಹಾಸ ಮಾತ್ರವೇ ಆಗಿತ್ತು. ಆದರೆ ಆ ದಿವಸ ನಾನು ನೋಡುತ್ತೇನೆ! ನಮ್ಮ ವಿಜಯ ನಗರವು ಅಲ್ಲಿ ಪ್ರತ್ಯಕ್ಷವಾಗಿಯೂ ವಿಸ್ತಾರವಾಗಿಯೂ ಭವ್ಯ ವಾಗಿಯೂ ನನ್ನ ಮುಂದೆ ಬಿದ್ದಿದೆ. ಆ ದಿವಸದ ದರ್ಶನವು ನನ್ನಲ್ಲಿ ವಿದ್ಯುತ್ತಿನ ಸಂಚಾರವನ್ನು ಮಾಡಿಸಿತು. ಚಲಚ್ಚಿತ್ರ ಪಟದಲ್ಲಿ ವಿದ್ಯುದ್ದೀಪದ ಬಲದಿಂದ ಮೂರ್ತಿಗಳು ಮೂಡು ವಂತೆ ನನ್ನ ಹೃದಯದಲ್ಲಿ ಕರ್ನಾಟಕದೇವಿಯ ಸುಂದರವಾದ ಮೂರ್ತಿಯು ಒಡಮೂಡಹತ್ತಿತು. ಆ ದಿವಸದ ದರ್ಶನವು ನನ್ನ ಹೃದಯದಲ್ಲಿ ನಾನಾ ವಿಧ ತರಂಗಗಳಿಗೆ ಇಂಬುಕೊಟ್ಟಿತು. ಹೃದಯಸಮುದ್ರವು ಅಲ್ಲೋಲಕಲ್ಲೋಲವಾಯಿತು. ಆ ದಿವಸವು ನನ ಜೀವನ ಕ್ರಮದಲ್ಲಿ ಕ್ರಾಂತಿಯನ್ನು ಮಾಡಲಿಕ್ಕೆ ಕಾರಣವಾಯಿತು......" ಎಂದು ತಮ್ಮ ಜೀವನದಲ್ಲಾದ ಮಹತ್ತರ ಪರಿವರ್ತನೆಯ ಸುವರ್ಣಕ್ಷಣದ ಚಿತ್ರವನ್ನು ಆಲೂರರು ನೀಡಿದ್ದಾರೆ. ಕರ್ನಾಟಕತ್ವದ ಜಾಗೃತಿಗೆ ಏಕೀಕರಣ ಚಳವಳಿಗೆ ನಾಂದಿಹಾಡಿದ ಘಟನೆ ಇದು. ಏಕೆಂದರೆ ಯಾವ ಆಲೂರು ವೆಂಕಟರಾಯರನ್ನು "ಕರ್ನಾಟಕ ಕುಲಪುರೋಹಿತ" ರೆಂದು ಕರೆಯುತ್ತಿದ್ದೇವೋ ಯಾರು ಕರ್ನಾಟಕತ್ವದ ಮಂತ್ರ ದೃಷ್ಟಾರರಾಗಿದ್ದಾರೋ ಅವರ ಜೀವನದಲ್ಲಿ 'ಜ್ಞಾನೋದಯ' ವಾದ ಅವರಿಗೆ 'ಮಂತ್ರದರ್ಶನ'ವಾದ ದಿನ ಅದು (ಮೇ 4, 1905).

ಆಗಿನ್ನೂ ಕರ್ನಾಟಕದ ಇತಿಹಾಸದ ಕುರಿತು ವ್ಯಾಪಕ ಜ್ಞಾನ ಜನರಿಗೆ ಇರಲಿಲ್ಲ. ಜಾನ್ ಫ್ಲೀಟ್ ಅವರು ಇಂಗ್ಲಿಷ್‌ನಲ್ಲಿ ಬರೆದ 'ದಿ ಡಿನ್ಯಾಸ್ಟೀಸ್ ಆಫ್ ದಿ ಕ್ಯಾನರೀಸ್ ಡಿಸ್ಟ್ರಿಕ್ಟ್ಸ ಇನ್ ದಿ ಬಾಂಬೆ ಪ್ರೆಸಿಡೆನ್ಸಿ' ಎಂಬ ಅಧ್ಯಾಯ ಬಾಂಬೆ ಗ್ಯಾಜೆಟಿಯರ್‌ನಲ್ಲಿ 1882ರಲ್ಲಿ ಪ್ರಕಟವಾಗಿತ್ತು. ಡಾ॥ ಭಂಡಾರ್ಕರ್ ಅವರ 'ದಿ ಅರ್ಲಿ ಹಿಸ್ಟರಿ ಆಫ್ ದಿ ದಖ್ಖಣ್' 1884ರಲ್ಲಿ ಹೊರಬಂದಿತ್ತು. ಇವೆರಡು ಕೃತಿಗಳಲ್ಲಿ 1300ರ ವರೆಗಿನ ಕರ್ನಾಟಕ ಇತಿಹಾಸ ಚಿತ್ರಿತವಾಗಿತ್ತು. ಇದಲ್ಲದೆ 1886 ರಿಂದಲೂ ರಾಯಿಸ್ ಅವರ ಯತ್ನದಿಂದ 'ಎಪಿಗ್ರಾಫಿಯಾ ಕರ್ನಾಟಿಕಾ' ಎಂಬ ಮೈಸೂರು ಸಂಸ್ಥಾನದ ಪ್ರದೇಶಗಳ ಶಾಸನಗಳ ಪ್ರಕಟಣೆ ಆರಂಭ ಆಗಿತ್ತು. 1901ರಲ್ಲಿ ರಾಬರ್ಟ್ ಸ್ಯೂಯೆಲ್ ಅವರು 'ಎ ಫಾರ್‌ಗಾಟನ್ ಎಂಪಯರ್' ಎಂಬ ವಿಜಯನಗರದ ಬಗೆಗಿನ ಕೃತಿಯನ್ನು ಪ್ರಕಟಿಸಿದ್ದರು. 1904 ರಲ್ಲಿ ಲೂಯಿಸ್ ರೈಸ್ ಅವರ 'ಮೈಸೂರ್ ಅ್ಯಂಡ್ ಕೂರ್ಗ್ ಫ್ರಾಂ ಇನ್‌ಸ್ಕ್ರಿಪ್‌ಶನ್ಸ್' ಪ್ರಕಟ ಆಗಿತ್ತು. ಹೀಗಿದ್ದರೂ ಇದೆಲ್ಲ ಕರ್ನಾಟಕದ ಇತಿಹಾಸಕ್ಕೇ ಸಂಬಂಧಿಸಿ ಆದ ಶೋಧನಾತ್ಮಕ ಕೃತಿಗಳೆಂಬುದಾಗಲೀ ಇಲ್ಲಿ ಉಲ್ಲೇಖಿತರಾದ ರಾಜವಂಶದವರು ಕನ್ನಡಿಗರೆಂಬ ಕಲ್ಪನೆಯಾಗಲೀ ಕನ್ನಡಿಗರಿಗೆ ಇರಲಿಲ್ಲ. ಕರ್ನಾಟಕದ ಇತಿಹಾಸವನ್ನು ತಿಳಿದುಕೊಳ್ಳುವ ಉತ್ಸಾಹವಾಗಲೀ ಅದಕ್ಕೆ ಅವಶ್ಯವಾದ ಗ್ರಂಥಪ್ರಸಾರ ವ್ಯವಸ್ಥೆಯಾಗಲೀ ಆಗ ಇರಲಿಲ್ಲ. ಈ ಕೃತಿಗಳೆಲ್ಲ ಆಗ ಇಂಗ್ಲಿಷ್‌ನಲ್ಲಿ ಬಂದಿದ್ದು ಇವುಗಳನ್ನು ಓದಿ ಅವರೊಳಗಿನ ವಿಷಯಗಳನ್ನು ಕನ್ನಡಿಗರಿಗೆ ತಿಳಿಯಪಡಿಸುವ ವ್ಯವಸ್ಥೆಯೊಂದೂ ಆಗ ಇರಲಿಲ್ಲ. ಈ ಶತಮಾನದ ಆರಂಭದ ದಶಕದಲ್ಲಿ ಉತ್ತರ ಕರ್ನಾಟಕ

ದಲ್ಲಿ ಕಾಲೇಜುಗಳೇ ಇರಲಿಲ್ಲ. ಬೆಂಗಳೂರು, ಮೈಸೂರು, ಮಂಗಳೂರುಗಳಲ್ಲಿ ಮಾತ್ರ ಇದ್ದವು. ವಿದ್ಯಾವಂತರಲ್ಲಿ ಹೆಚ್ಚಿನವರು ಸರಕಾರೀ ನೌಕರರೂ ವಕೀಲರು ಆಗಿದ್ದರು. ಕರ್ನಾಟಕದ ಬಗ್ಗೆ ಅಭಿಮಾನವಿದ್ದವರ ಸಂಖ್ಯೆ ಅತ್ಯಲ್ಪ. ಇಂಥ ಅಭಿಮಾನಿಗಳ ಗಮನ ಕನ್ನಡ ಸಾಹಿತ್ಯ, ಭಾಷೆಗಳ ಅಧ್ಯಯನದ ಕಡೆ ಕೇಂದ್ರೀಕೃತವಾಗಿತ್ತಲ್ಲದೆ ಕರ್ನಾಟಕದ ಇತಿಹಾಸದ ಕಡೆ ಅಲ್ಲ.

ಈ ಹಿನ್ನೆಲೆಯಲ್ಲಿ ಆಲೂರರು ಕರ್ನಾಟಕದ ಇತಿಹಾಸವನ್ನು ಕನ್ನಡದಲ್ಲಿ ಬರೆದು 1917ರಲ್ಲಿ ಪ್ರಕಟಿಸಿದ್ದು ಒಂದು ಮಹತ್ವದ ಹೆಜ್ಜೆ. 'ಕರ್ನಾಟಕ ಗತವೈಭವ' ಎಂಬ ಹೆಸರಲ್ಲಿ ಪ್ರಕಟಿಸಿದ ಈ ಕೃತಿಯಲ್ಲಿ ಕರ್ನಾಟಕದ ಇತಿಹಾಸದ ಮುಖ್ಯ ಹಂತಗಳನ್ನು ಅವರು ಗುರುತಿಸಿದರು. ರಾಜಕೀಯ, ಧರ್ಮ, ಕಲೆ, ಸಾಹಿತ್ಯ ಮುಂತಾದ ಕ್ಷೇತ್ರಗಳಲ್ಲಿನ ಮುಖ್ಯ ಸಾಧನೆಗಳನ್ನು ಅವರು ಅಲ್ಲಿ ಚಿತ್ರಿಸಿದರು. ಈ ಇತಿಹಾಸದ ಪಠಣವು ತಮ್ಮಲ್ಲಿ ಕೆರಳಿಸಿದ ಭಾವನೆಗಳನ್ನು ಅವರು ಹೀಗೆ ವ್ಯಕ್ತಪಡಿಸಿದರು: "ಕನ್ನಡಿಗರೇ! ನಿಮ್ಮ ಸುತ್ತಮುತ್ತಲೂ ದೃಷ್ಟಿಯನ್ನು ಚೆಲ್ಲಿದರೆ ಅಲ್ಲಲ್ಲಿ ನಿಮ್ಮ ಪ್ರಾಚೀನ ಕರ್ನಾಟಕದ ದೇದೀಪ್ಯಮಾನವಾದ ಹೆಗ್ಗುರುತುಗಳು ಕಣ್ಣಿಗೆ ಕಟ್ಟದಿರಲಾರವು; ಆ ನಾಡಿನಲ್ಲಿ ಹುಟ್ಟಿಬೆಳೆದು ದಿಗಂತ ಕೀರ್ತಿಯನ್ನು ಪಡೆದ ರಾಜಕಾರ್ಯ ಧುರಂಧರರ, ಮೇಧಾವಿಗಳ ಮತ್ತು ರಾಜಗುರುಗಳ ಜೀವನಚರಿತ್ರೆಯನ್ನೋದಿದರೆ, ನಮ್ಮ ಜೀವನದ ಒಗಟೆಯು ಸಹಜವಾಗಿ ಒಡೆಯದೆ ನಿಲ್ಲದು; ಆ ನಾಡಿನ ಪ್ರಾಚೀನ ಸಂಪತ್ತಿಗೂ ಕಲಾಕೌಶಲ್ಯಕ್ಕೂ ಸಾಕ್ಷಿಯಾಗಿ ನಿಂತಿರುವ

ಗುಡಿಗೋಪುರಗಳನ್ನು ನೋಡಿದರೆ, ಇಂತಹ ಅಮಾನುಷ ಕಾರ್ಯ ಗಳನ್ನು ಸುಲಭವಾಗಿ ನೆರವೇರಿಸಿದ ರಾಷ್ಟ್ರದ ಅಗ್ಗಳಿಕೆಯು ಸಹಜವಾಗಿ ಗೊತ್ತಾಗುವುದು."

ಹೀಗೆ ಆರಂಭವಾದ ಕರ್ನಾಟಕತ್ವದ ಜಾಗೃತಿಯೇ ಕರ್ನಾಟಕ ಏಕೀಕರಣ ಚಳವಳಿಗೆ ನಾಂದಿಯಾಯಿತು. ಕನ್ನಡ ಮಾಧ್ಯಮದಲ್ಲಿ ಶಿಕ್ಷಣ, ಕನ್ನಡ ಪ್ರಾಚೀನ ಕಾವ್ಯಗಳ ಪ್ರಕಟಣೆ (ಬಿಬ್ಲ್ಯಿಥಿಕಾ ಕರ್ನಾಟಿಕಾ ಮಾಲೆಯನ್ನು ಮೈಸೂರು ಮಹಾರಾಜರ ಸರಕಾರವೇ ಕೈಗೊಂಡಿತ್ತು), ಕ್ರೈಸ್ತ ಮಿಶನರಿಗಳು ನಡೆಸಿದ ಗ್ರಂಥರಚನೆ, ಮುದ್ರಣ, ಪತ್ರಿಕೆಗಳ ಪ್ರಕಟಣೆಗಳ ಹಿನ್ನೆಲೆಯಲ್ಲಿ ಆಲೂರರ ಕಾರ್ಯ ಪರಿಣಾಮಕಾರಿಯಾಗಿ ಫಲಿಸಿತು. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘವು ಆಲೂರರ ಮುಖ್ಯ ಕಾರ್ಯರಂಗವಾಯಿತು. 'ವಾಗ್ಭೂಷಣ' ಪತ್ರಿಕೆಯ ಸಂಪಾದಕತ್ವ ವನ್ನು ಅವರು ವಹಿಸಿಕೊಂಡರು. 1907 ಮತ್ತು 1908ರಲ್ಲಿ ಇಡೀ ಕನ್ನಡಮಾತನಾಡುವ ಪ್ರದೇಶಗಳಲ್ಲಿರುವ ಕನ್ನಡ ಬರಹಗಾರರನ್ನು ಆಮಂತ್ರಿಸಿ ಕರ್ನಾಟಕ ಗ್ರಂಥಕರ್ತರ ಸಮ್ಮೇಳನವನ್ನು ಅವರು ನಡೆಸಿದರು. ಏಕೀಕರಣದ ಕಲ್ಪನೆಯನ್ನು ಪ್ರತಿಪಾದಿಸಿ 1907ರಲ್ಲಿ 'ವಾಗ್ಭೂಷಣ'ದಲ್ಲಿ ಒಂದು ಲೇಖನವನ್ನು ಪ್ರಕಟಿಸಿದರಲ್ಲದೆ ಗ್ರಂಥಕರ್ತರ ಸಮ್ಮೇಳನದಲ್ಲೂ ಅದನ್ನು ಪ್ರಸ್ತಾಪಿಸಿ ನಾಡ ಮೂಲೆ ಮೂಲೆಯಲ್ಲಿದ್ದ ಕನ್ನಡ ಬರಹಗಾರರ ಬೆಂಬಲವನ್ನು ಅದಕ್ಕೆ ಪಡೆದರು. 1913ರಲ್ಲಿ ಡಿ. ವಿ. ಗುಂಡಪ್ಪನವರು "ಕರ್ನಾಟಕ" ಎಂಬ ಇಂಗ್ಲಿಷ್ ಪತ್ರಿಕೆಯನ್ನು ಬೆಂಗಳೂರಲ್ಲಿ ಆರಂಭಿಸಿದಾಗ ಅದರಲ್ಲೂ

ಆಲೂರರು ಏಕೀಕರಣವನ್ನು ಬೆಂಬಲಿಸಿ ಲೇಖನವನ್ನು ಬರೆದರು. ಬಹಳಷ್ಟು ಶ್ರಮವಹಿಸಿ, 2–3 ವರ್ಷಗಳ ಅವಧಿಯಲ್ಲಿ ಬೆಂಗಳೂರು, ಮೈಸೂರುಗಳನ್ನು ಪದೇಪದೇ ಸಂದರ್ಶಿಸಿ, ಮೈಸೂರಿನ ವಿದ್ಯಾ ಇಲಾಖೆಯ ಅಧಿಕಾರಿಗಳಾದ ಎಚ್. ವಿ. ನಂಜುಂಡಯ್ಯ ಹಾಗೂ ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಮನವೊಲಿಸಿ ಆಲೂರರೇ ಬೆಂಗಳೂರಿನಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಲು ಕಾರಣರಾದರು. ಪರಿಷತ್ತಿನ ಆಶ್ರಯದಲ್ಲಿ ನಡೆಯುತ್ತಿದ್ದ ವಾರ್ಷಿಕ ಸಾಹಿತ್ಯ ಸಮ್ಮೇಳನವು ಕರ್ನಾಟಕದ ಬುದ್ಧಿಜೀವಿಗಳ, ಲೇಖಕರ, ಪತ್ರಕರ್ತರ ಸಂಗಮ ಸ್ಥಾನವಾಗಿ ಕರ್ನಾಟಕತ್ವದ ಜಾಗೃತಿ, ಕನ್ನಡಾಭಿಮಾನಿಗಳ ತೂಗು ತೊಟ್ಟಿಲಾಯಿತು. ಮಂಗಳೂರಿನ ಕಡೆಕಾರು ರಾಜಗೋಪಾಲಕೃಷ್ಣರಾವ್, ಪಂಜೆ ಮಂಗೇಶರಾವ್, ಗೋವಿಂದ ಪೈ, ಮೈಸೂರಿನ ಬಿ. ಎಂ. ಶ್ರೀಕಂಠಯ್ಯ, ಟಿ. ಎಸ್. ವೆಂಕಣ್ಣಯ್ಯ, ಕರ್ಪೂರ ಶ್ರೀನಿವಾಸರಾವ್, ಆರ್. ನರಸಿಂಹಾಚಾರ್, ಕೆ. ಪಿ. ಪುಟ್ಟಣ್ಣಚೆಟ್ಟಿ, ಹೈದರಾಬಾದ್ ಕರ್ನಾಟಕದ ಪಂ॥ ತಾರಾನಾಥ, ಚಿಮ್ಮಲಗಿ, ಕಪಟರಾಳ ಕೃಷ್ಣರಾವ್, ಜಮಖಂಡಿಯ ತಮ್ಮಣಪ್ಪ ಚಿಕ್ಕೋಡಿ, ಮದ್ರಾಸಿನ ಬೆಣಗಲ್ ರಾಮರಾವ್ ಹೀಗೆ ವಿವಿಧ ಪ್ರದೇಶದ ವಿವಿಧ ವರ್ಗಗಳ ಜನ ಪರಿಷತ್ತಿನ ಚಟುವಟಿಕೆಗಳಿಗೆ ಬೆಂಬಲವಾಗಿ ನಿಂತರು. ನಾಡಿನ ಬುದ್ಧಿಜೀವಿಗಳು ಪರಿಷತ್ತಿನ ಮೂಲಕ ಎತ್ತಿ ಹಿಡಿದ ಏಕೀಕರಣದ ಕಲ್ಪನೆಯು ಕಾರ್ನಾಡ್ ಸದಾಶಿವರಾವ್, ಗಂಗಾಧರರಾವ್ ದೇಶಪಾಂಡೆ, ಕೌಜಲಗಿ ಶ್ರೀನಿವಾಸರಾವ್ ಮುಂತಾದ ಸ್ವಾತಂತ್ರ್ಯ ಚಳವಳಿಯ ನಾಯಕರನ್ನೂ ಆಕರ್ಷಿಸಿತು. ಆಗ ಸ್ವಾತಂತ್ರ್ಯ ಚಳವಳಿಯನ್ನು ಅಷ್ಟೊಂದು ಬೆಂಬಲಿಸದೇ ಇದ್ದ

ಕೆ. ಪಿ. ಪುಟ್ಟಣಚೆಟ್ಟಿ, ತಮ್ಮಣ್ಣಪ್ಪ ಚಿಕ್ಕೋಡಿ, ಹಳಕಟ್ಟಿ, ಸರ್ ಸಿದ್ದಪ್ಪ ಕಂಬಳಿ ಮುಂತಾದ ಗಣ್ಯ ನಾಯಕರೂ ಏಕೀಕರಣವನ್ನು ಬೆಂಬಲಿಸಿದರು.

ಆದರೆ ಈ ಮಂತ್ರದ ಪ್ರತಿಪಾದಕರು ಆಲೂರರೇ. ಅವರ ಈ ಯತ್ನದಲ್ಲಿ ಬೆಂಬಲಿಗರಾಗಿ ನಿಂತವರು ಧಾರವಾಡದ ಗಣ್ಯ ನಾಯಕರಾದ ಮುದವೀಡು ಕೃಷ್ಣರಾವ್, ಮುದವೀಡು ವೆಂಕಟರಾವ್, ಕಡಪಾ ರಾಘವೇಂದ್ರರಾವ್, ಸಾ. ಶ್ರೀ. ರಾಜಪುರೋಹಿತ, ಗದಿಗೆಯ್ಯಾ ಹುಚ್ಚಯ್ಯಾ ಹೊನ್ನಾಪುರಮಠ. ರಂ. ರಾ. ದಿವಾಕರ ಹಾಗೂ ಧಾರವಾಡದಲ್ಲಿ ಮುಂದೆ ರೂಪುತಾಳಿದ ಗೆಳೆಯರ ಗುಂಪಿನ ತರುಣರು.

1920ರಲ್ಲಿ ಧಾರವಾಡದಲ್ಲಿ ಸಮಾವೇಶಗೊಂಡ ಪ್ರಥಮ ಕರ್ನಾಟಕ ಪ್ರಾಂತೀಯ ರಾಜಕೀಯ ಪರಿಷತ್ತಿನಲ್ಲಿ ಕರ್ನಾಟಕಕ್ಕೆ ಪ್ರತ್ಯೇಕವಾದ ಕಾಂಗ್ರೆಸ್ ಸಮಿತಿಯಿರಬೇಕೆಂಬ ಬಗ್ಗೆ ತೀವ್ರವಾಗಿ ಒತ್ತಾಯಿಸಲಾಯಿತು. ಮೈಸೂರಿನ ಮಾಜೀ ದಿವಾನರಾದ ವಿ. ಪಿ. ಮಾಧವರಾವ್ ಈ ಪರಿಷತ್ತಿನ ಅಧ್ಯಕ್ಷರು. ಪ್ರತ್ಯೇಕ ಕೆ.ಪಿ.ಸಿ.ಸಿ. ಬೇಕೆಂಬ ಬೇಡಿಕೆಯ ಪರ ಕಾಂಗ್ರೆಸ್‌ನ ರಾಷ್ಟ್ರೀಯ ನಾಯಕರ ಮೇಲೆ ಒತ್ತಾಯ ತರಲು ಅಧಿಕ ಸಂಖ್ಯೆಯಲ್ಲಿ ಕನ್ನಡಿಗರು ನಾಗಪುರದಲ್ಲಿ ನಡೆಯಲಿರುವ ಕಾಂಗ್ರೆಸ್ಸಿನ ವಾರ್ಷಿಕಾಧಿವೇಶನಕ್ಕೆ ಹೋಗಬೇಕೆಂದು ಈ ಪರಿಷತ್ತು ನಿರ್ಧರಿಸಿತು. ಸುಮಾರು 800 ಪ್ರತಿನಿಧಿಗಳು ಕರ್ನಾಟಕದಿಂದ 1920ರ ನಾಗಪುರ ಕಾಂಗ್ರೆಸ್ಸಿಗೆ ತೆರಳಿದರು. ನಾಗಪುರ ಕಾಂಗ್ರೆಸ್ಸು ಪ್ರತ್ಯೇಕ ಕೆ.ಪಿ.ಸಿ.ಸಿ. (ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿ) ರಚಿಸಲು ನಿರ್ಣಯ ಮಾಡಿತು. ಏಕೀ

ಕರಣದ ದೆಸೆಯಲ್ಲಿ ಮೊದಲ ಹೆಜ್ಜೆ ಇದಾಯಿತು. ಕರ್ನಾಟಕ ಸಿಂಹ ಗಂಗಾಧರರಾವ್ ದೇಶಪಾಂಡೆಯವರು ಕೆ.ಪಿ.ಸಿ.ಸಿ. ಯ ಪ್ರಥಮಾಧ್ಯಕ್ಷರಾದರು. ಹೀಗೆ ಸಾಹಿತಿಗಳ, ಪತ್ರಕರ್ತರ ಕೂಗಿಗೆ ರಾಜಕಾರಣಿಗಳ ಬೆಂಬಲ ದೊರೆಯಿತು. ಕರ್ನಾಟಕದ ಮೂಲೆಮೂಲೆಗಳಲ್ಲಿ ಮರಾಠಿ, ತಮಿಳು, ತೆಲುಗುಗಳ ಬದಲಿಗೆ ಕನ್ನಡದಲ್ಲಿ ರಾಜಕೀಯ ಭಾಷಣಗಳಾದುವು. ಮುದವೀಡು ಕೃಷ್ಣರಾವ್, ಕಡಪಾ ರಾಘವೇಂದ್ರರಾವ್, ಶ್ರೀನಿವಾಸರಾವ್ ಕೌಜಲಗಿ, ಜಯರಾವ್ ನರಗುಂದ, ಗಂಗಾಧರರಾವ್ ದೇಶ ಪಾಂಡೆ ಮುಂತಾದ ರಾಜಕೀಯ ನಾಯಕರ ಕನ್ನಡ ಭಾಷಣ ಗಳಿಂದ ಜನಸಾಮಾನ್ಯರಲ್ಲೂ ಜಾಗೃತಿ ಮೂಡುವಂತಾಯಿತು. ಕನ್ನಡದಲ್ಲಿ ಅನೇಕ ಪತ್ರಿಕೆಗಳು ರಾಜಕೀಯ ಜಾಗೃತಿಯನ್ನು ಗುರಿಯಾಗಿಹೊಂದಿ ಮೂಡಿಬಂದವು. ಕನ್ನಡಾಭಿಮಾನ, ರಾಷ್ಟ್ರಾಭಿಮಾನಗಳೆರಡೂ ಇವುಗಳ ಗುರಿಯಾಗಿದ್ದವು.

3

1920 ಕರ್ನಾಟಕತ್ವದ ಜಾಗೃತಿ, ಏಕೀಕರಣ ಚಳವಳಿಗಳ ದೆಸೆಯಲ್ಲಿ ಬಹಳ ಮಹತ್ವದ ವರ್ಷ. ಆಗಲೇ ಮಂಗಳೂರಿನ 'ಸ್ವದೇಶಾಭಿಮಾನಿ', ಕುಮಟೆಯ 'ಕಾನಡವೃತ್ತ', ಬೆಂಗ ಳೂರಿನ ಇಂಗ್ಲಿಷ್ ಪತ್ರಿಕೆ 'ಕರ್ನಾಟಕ' ಹಾಗೂ ಧಾರವಾಡದ 'ರಾಜಹಂಸ', 'ಶುಭೋದಯ', 'ಕರ್ನಾಟಕವೃತ್ತ', 'ಧನಂ ಜಯ' ಮುಂತಾದ ಪತ್ರಿಕೆಗಳು ಹಾಗೂ ಆಲೂರರೇ ಸಂಪಾ ದಕತ್ವ ವಹಿಸಿ ನಡೆಸುತ್ತಿದ್ದ 'ಜಯಕರ್ನಾಟಕ'ಗಳು ಕನ್ನಡದ ಕೆಲಸವನ್ನು ಮಾಡುತ್ತಲೇ ಇದ್ದವು. ಮುಂದೆ ಅಸಹಕಾರ

ಚಳವಳಿಯ ಯುಗದಲ್ಲಿ 1920–21ರಲ್ಲಿ ಮಡಿಕೇರಿಯ 'ಕೊಡಗು', ಮಂಗಳೂರಿನಲ್ಲಿ 'ತಿಲಕ ಸಂದೇಶ', ಉಡುಪಿಯ 'ಸತ್ಯಾಗ್ರಹಿ',ಧಾರವಾಡದ 'ಕರ್ಮವೀರ', 'ವಿಜಯ', ಬಾಗಲ ಕೋಟೆಯ 'ಕನ್ನಡ ಸಹಜೀವನ', ಹೀಗೆ ವಿವಿಧ ಪತ್ರಿಕೆಗಳು ಈ ಕೆಲಸ ಮಾಡಿದವು. ಇದೇ ಅವಧಿಯಲ್ಲಿ ಮುಂದೆ ಬಾಗಲ ಕೋಟೆಯ 'ಕನ್ನಡಿಗ' ಹಾಗೂ ಬೆಂಗಳೂರಿನ 'ವಿಶ್ವಕರ್ನಾಟಕ' ಪತ್ರಿಕೆಗಳು ಮಾಡಿದ ಕೆಲಸ ಗಣನೀಯ.

ಏಕೀಕರಣ ಮತ್ತು ಸ್ವಾತಂತ್ರ್ಯ ಚಳವಳಿಗಳೆರಡೂ ಸಮ ಸಮವಾಗಿಯೋ ಜತೆಜತೆಯಾಗಿಯೋ ಸಾಗಿದವು. 1924ರಲ್ಲಿ ಬೆಳಗಾವಿಯಲ್ಲಿ ಅ. ಭಾ. ಕಾಂಗ್ರೆಸ್ಸಿನ 39ನೆಯ ಅಧಿವೇಶನವು ಮಹಾತ್ಮಾ ಗಾಂಧಿಯವರ ಅಧ್ಯಕ್ಷತೆಯಲ್ಲಿ ಆದಾಗ ಕರ್ನಾಟಕ ಸಂಸ್ಕೃತಿಯ ಸಮಗ್ರದರ್ಶನಕ್ಕೆ ಸಕಲ ಯತ್ನ ಮಾಡಲಾಯಿತು. ಅಧಿವೇಶನ ನಡೆದ ಸ್ಥಳ 'ವಿಜಯನಗರ'; ಅಲ್ಲಿ ನೀರೊದಗಿಸಲು ಅಗೆದ ಪುಟ್ಟ ಕೆರೆ 'ಪಂಪಾಸರೊವರ'; ಅಧಿವೇಶನ ಸ್ಥಳದ ಪ್ರವೇಶದ್ವಾರ ಹಂಪೆಯ ವಿರೂಪಾಕ್ಷನ ಗೋಪುರದಂತೆ ಇತ್ತು. ಕರ್ನಾಟಕ ಸಂಸ್ಕೃತಿಯ ಪರಿಚಯ ನೀಡುವ ಸಂಗೀತ, ಮನ ರಂಜನೆ ಇತ್ತು. ವೀಣೆ ಶೇಷಣ್ಣ ಸ್ವತಃ ಬಂದು ವೀಣೆ ನುಡಿಸಲು ಮಹಾತ್ಮರ ಆದಿಯಾಗಿ ಎಲ್ಲ ಅಖಿಲ ಭಾರತ ನಾಯಕರು ತಲೆದೂಗಿದರು. ಅದೇ ಸ್ಥಳದಲ್ಲಿ ಆಗ ಪ್ರಥಮ ಏಕೀಕರಣ ಸಮ್ಮೇಳನವು ಸರ್ ಸಿದ್ದಪ್ಪ ಕಂಬಳಿಯವರ ಅಧ್ಯಕ್ಷತೆ ಯಲ್ಲಿ ನಡೆಯಿತು. ಹುಯಿಲಗೋಳ ನಾರಾಯಣರಾಯರು ಆಗಲೇ "ಉದಯವಾಗಲಿ ನಮ್ಮ ಚಲುವ ಕನ್ನಡನಾಡು" ನಾಡಗೀತೆಯನ್ನು ಹಾಡಿದರು.

ಕರ್ನಾಟಕತ್ವವು ರಾಷ್ಟ್ರೀಯತ್ವಕ್ಕೆ ಪೂರಕವಾದ ಕಲ್ಪನೆಯಾಗಿತ್ತು. ರಾಷ್ಟ್ರೀಯ ಜಾಗೃತಿಯಾಗಬೇಕಾದರೆ ಕರ್ನಾಟಕತ್ವದ ಜಾಗೃತಿಯಾಗಬೇಕೆಂಬ ಸಂಗತಿಯನ್ನು ಮನವರಿಕೆ ಮಾಡಿಕೊಂಡೇ ಆಲೂರು ವೆಂಕಟರಾಯರು ಈ ದೆಸೆಯಲ್ಲಿ ಹೆಜ್ಜೆ ಹಾಕಿದ್ದರು. "ಕರ್ನಾಟಕಾಂತರ್ಯಾಮಿ ಭಾರತಮಾತೆ"ಯ ಆರಾಧನೆಯ ಕಲ್ಪನೆಯನ್ನು ಸದಾ ಅವರು ಪ್ರತಿಪಾದಿಸಿದರು. ಹಲವು ಕನ್ನಡಿಗಳಲ್ಲಿ ಒಂದೇ ವಸ್ತುವಿನ ಪ್ರತಿಬಿಂಬ ಒಡಮೂಡುವುದು; ಇದೇ ರೀತಿ ಹಲವು ಪ್ರಾಂತಗಳಲ್ಲಿ ಒಂದೇ ದೇಶದ ಕಲ್ಪನೆ ಪಡಿಮೂಡುವುದು. ಶ್ರೀಕೃಷ್ಣ ಪರಮಾತ್ಮನು ಒಬ್ಬನೇ ಇದ್ದರೂ ಹಲವಾರು ಗೋಪಿಯರ ಜೊತೆ ಒಂದೇ ಹೊತ್ತಿಗೆ ಒಡನಾಡುತ್ತ ಪ್ರತಿಯೊಬ್ಬರ ಜೊತೆ ಏಕಕಾಲದಲ್ಲಿ ಇರುವಂತೆ ಇದ್ದನು. ಪ್ರಾಂತಗಳಿಂದ ರಾಷ್ಟ್ರೀಯತೆ ಹೀಗೆ ಒಡಮೂಡುವುದು, ಎಂಬುದು ಆಲೂರರ ಸ್ಪಷ್ಟ ಕಲ್ಪನೆ.

ಈ ಮಾತು ನಿಜವಾಗಿತ್ತು. ಕರ್ನಾಟಕತ್ವದ ಅಭಿಮಾನಕ್ಕೆ ಅವರು ಸದಾ ಶ್ರಮಿಸಿದರು. ಪಂಪ, ಲಕ್ಷ್ಮೀಶರಂಥ ಕವಿಗಳ ಸ್ಮರಣೆಯ ಉತ್ಸವ ನಡೆಸಿದರು. ವಿಜಯನಗರ ಷಟ್‌ಶತಮಾನೋತ್ಸವ ನಡೆಸಿದರು. ನಾಡಹಬ್ಬವಾಗಿ ದಸರಾವನ್ನು ಆಚರಿಸಲು ಹಚ್ಚಿದರು. ಕರ್ನಾಟಕಕ್ಕೆ ಸಂಬಂಧಿಸಿದ ಈ ಹಬ್ಬಗಳ ಪೌರೋಹಿತ್ಯವಹಿಸಿ "ಕನ್ನಡ ಕುಲಪುರೋಹಿತ" ರೆಂದು ಖ್ಯಾತರಾದರು. ಈ ಕನ್ನಡ ಜಾಗೃತಿಗಾಗಿ ಶ್ರಮಿಸುತ್ತಿದ್ದಾಗಲೇ ರಾಷ್ಟ್ರೀಯ ಚಟುವಟಿಕೆಯನ್ನು ಮರೆಯಲಿಲ್ಲ. ಧಾರವಾಡದಲ್ಲಿ ಅಸಹಕಾರ ಪರ್ವದಲ್ಲಿ 1921ರಲ್ಲಿ ಆದ ಗೋಳೀಬಾರಿನ ಕಾಲಕ್ಕೆ ಧಾರವಾಡದ ರಾಷ್ಟ್ರೀಯ ಪತ್ರಿಕೆಗಳ

ಸಂಪಾದಕರೆಲ್ಲರೂ ಜೈಲುಕಂಡಾಗ ಐದಾರು ಪತ್ರಿಕೆಗಳ ಸಂಪಾದಕತ್ವವನ್ನು ತಾವೇ ನಿರ್ವಹಿಸಿದರು. ಬ್ರಿಟಿಷ್ ಅಧಿಕಾರೀ ಪಾಹಿಯನ್ನು ಖಂಡಿಸಿ "ಭೂರಕ್ಕಸಾಯ ಸ್ವಾಹಾ" ಎಂದು ಅವರು 'ಕರ್ಮವೀರ'ದಲ್ಲಿ ಬರೆದಿದ್ದ ಲೇಖನವು ಪತ್ರಿಕೆಯ ಸಂಪಾದಕರಾದ ರಂ. ರಾ. ದಿವಾಕರರ ಮೇಲೆ ಆರೋಪಿತವಾಗಿ ಅವರ ಬಂಧನಕ್ಕೆ ಕಾರಣವಾಗಿತ್ತು. ಧಾರವಾಡದ ರಾಷ್ಟ್ರೀಯ ಶಾಲೆಯಲ್ಲಿ ಅವರು ಅಧ್ಯಾಪಕರೂ ಆಗಿ ದುಡಿದರು. ತಮ್ಮ ರಾಷ್ಟ್ರೀಯ ಚಟುವಟಿಕೆಗಳಿಗಾಗಿ ಜೈಲು ಕಾಣುವ ಪ್ರಸಂಗಗಳೂ ಸ್ವತಃ ಆಲೂರರಿಗೆ ಬಂದಿವೆ. ಆದರೆ ಕರ್ನಾಟಕತ್ವದ ಜಾಗೃತಿಗೆ ಅವರು ಆದ್ಯ ಗಮನವಿತ್ತರು. ಕನ್ನಡ ಗ್ರಂಥಾಲಯ ಚಳವಳಿ, ಕನ್ನಡ ವಾಚನಾಲಯ ಚಳವಳಿ, ನಾಡಹಬ್ಬ ಆಚರಣೆ, ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆಯ ಯತ್ನ, ಕನ್ನಡದಲ್ಲಿ ಗ್ರಂಥಗಳ ಪ್ರಕಟಣೆ ('ಕರ್ನಾಟಕ ಗತವೈಭವ'ವೇ ಅಲ್ಲದೆ 'ವಿದ್ಯಾರಣ್ಯ ಚರಿತ್ರೆ' 'ಕರ್ನಾಟಕದ ವೀರರತ್ನಗಳು' ಮುಂತಾದ ಹಲವಾರು ಅವರ ಕೃತಿಗಳು ಪ್ರಕಟವಾಗಿವೆ), ಕರ್ನಾಟಕ ಇತಿಹಾಸ ಸಂಶೋಧನ ಮಂಡಲ (1916) ಸ್ಥಾಪನೆ, ಹೀಗೆ ಹಲವಾರು ಕನ್ನಡಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಅವರು ಮಾಡಿದರು. 'ಪ್ರಾಚೀನ ಕರ್ನಾಟಕ'ಎಂಬ ತ್ರೈಮಾಸಿಕವೂ ಇವರ ಸಂಪಾದಕತ್ವದಲ್ಲಿ ಪ್ರಕಟವಾಯಿತು. ಕನ್ನಡದ ಬಗ್ಗೆ ಜಾಗೃತಿ ಬೆಳೆದು ಸೆಂಟ್ರಲ್ ಕಾಲೇಜಿನಲ್ಲಿ (ಬೆಂಗಳೂರು) ಕರ್ನಾಟಕ ಸಂಘ ಸ್ಥಾಪನೆಯಾಯಿತು. ಶಿವಮೊಗ್ಗ, ರಾಯಚೂರುಗಳಂಥ ಊರುಗಳಲ್ಲೂ ಇಂಥ ಸಂಘಗಳು ಮೊದಲಿಟ್ಟವು.

ಕರ್ನಾಟಕದ ಪರಂಪರೆಯು ಕುರಿತು ಜಾಗೃತಿ, ಭಾಷಾಭಿಮಾನದ ಜಾಗೃತಿಗಳು ಕನ್ನಡಿಗರನ್ನು ಬಡಿದೆಬ್ಬಿಸಿದವು. ಭಾಷಾಭಿಮಾನವು ದೇಶಾಭಿಮಾನಕ್ಕೆ ಮಾರಕವಾಗಲಿಲ್ಲ. ಪ್ರಾಂತಾಭಿಮಾನವು ರಾಷ್ಟ್ರಾಭಿಮಾನಕ್ಕೆ ಪೂರಕವೇ ಆಯಿತು.

"ಸುಮಾರು 1905 ರಿಂದ 1920ರವರೆಗಿನ ಕಾಲದಲ್ಲಿ ಭಾರತದ ರಾಜಕೀಯ ರಂಗದಲ್ಲಿ ಕಾಲಿಟ್ಟ ಕರ್ನಾಟಕದ ಕಾರ್ಯಕರ್ತರು ಎರಡು ಕನಸುಗಳನ್ನು ಕಂಡರು; ಎರಡು ಕಲ್ಪನೆಗಳನ್ನು ಕಟ್ಟಿದರು; ಎರಡು ನಕ್ಷೆಗಳನ್ನು ಮುಂದಿಟ್ಟುಕೊಂಡರು; ಒಂದು ಭಾರತದ ಸ್ವಾತಂತ್ರ್ಯ, ಇನ್ನೊಂದು ಕರ್ನಾಟಕದ ಏಕೀಕರಣ", ಎಂಬ ರಂ. ರಾ. ದಿವಾಕರರ ಮಾತು ಈ ಘಟನಾವಳಿಗಳ ಸ್ಪಷ್ಟ ಚಿತ್ರ ನೀಡುತ್ತದೆ.

'ಕರ್ನಾಟಕತ್ವ'ದ ಕಲ್ಪನೆಯನ್ನು ಆಲೂರು ವೆಂಕಟರಾಯರಂಥ ವಿಚಾರವೇತ್ತರು, ದೇಶಭಕ್ತರು ಮೊದಲು ಗ್ರಂಥಕರ್ತರ, ಸಾಹಿತಿಗಳ ಮುಂದಿಟ್ಟರು. ಸಾಹಿತಿಗಳೂ ಪತ್ರಕರ್ತರೂ ಇದನ್ನು ಜನಪ್ರಿಯಗೊಳಿಸಿದರು. ಈ 'ಕರ್ನಾಟಕತ್ವ'ವು ರಾಷ್ಟ್ರೀಯತ್ವಕ್ಕೆ ಪೂರಕವಾಗಿ ಹೇಗೆ ಬೆಳೆಯಿತೆಂಬ ಮಾತು ಮುಂದೆ ಕನ್ನಡದಲ್ಲಿ ಬೆಳೆದ ಸಾಹಿತ್ಯದಿಂದ ಸ್ಪಷ್ಟವಾಗಬಲ್ಲದು. ಏಕೆಂದರೆ ಕನ್ನಡದ ಗಣ್ಯ ಕವಿಗಳೆಲ್ಲರೂ ಕರ್ನಾಟಕವನ್ನೂ ಭಾರತವನ್ನೂ ಸಮಾನವಾದ ಅಭಿಮಾನ, ಗೌರವ, ಪ್ರೀತಿಗಳಿಂದ ಹಾಡಿ ಹೋಗಳಿದ್ದು ನಮಗೆ ಕಂಡುಬಾರದೇ ಇಲ್ಲ. ಉದಾಹರಣೆಗಳನ್ನೇ ನೋಡಿ:

"ಏರಿಸೀ ಹಾರಿಸೀ ಕನ್ನಡದ ಬಾವುಟ
ಹಾರಿಸೀ ತೋರಿಸೀ ಕೆಚ್ಚೆದೆಯ ಬಾವುಟ"

ಎಂದ ಕನ್ನಡದ ಆಚಾರ್ಯ ಶ್ರೀ ಬಿ. ಎಂ. ಶ್ರೀಯವರೇ

"ಭರತಮಾತೆಯೆ ಭರತಮಾತೆಯೆ
ಎಂದು ನೀಂತಲೆಯೆತ್ತುವೆ ?
ಎಂದು ದೇಶದ ಜನರ ಮನದಲಿ
ನಿನ್ನ ಮಹಿಮೆಯ ಬಿತ್ತುವೆ ?"

ಎಂದರು.

"ತಾಯೆ ಬಾರ ಮೊಗವ ತೋರ
ಕನ್ನಡಿಗರ ಮಾತೆಯೇ"

ಎಂದು ಕನ್ನಡಾಂಬೆಯನ್ನು ಹಾಡಿ ಹೊಗಳಿದ ಮಂ. ಗೋವಿಂದ ಪೈ ಅವರೇ,

"ಬೇಡೆಂ ಕೀರ್ತಿಯ ಬೇಡೆಂ ನಾಪ್ರಭುತೆಯ-
ನ್ನೈಶ್ವರ್ಯಮಾಯುಷ್ಯಮಂ
ನಾ ನಾಕವ ಬೇಡೆ ಮೋಕ್ಷವನೆ ಬೇಡೆಂ
ಜನ್ಮಜನ್ಮಂಗಳೊಳ್ ಭಾರತದೊಳೆನ್ನ ಪುಟ್ಟಿಸೈ..."

ಎಂದು ಪ್ರಾರ್ಥನೆ ಮಾಡಿದರು.

ಕವಿ ವಿನಾಯಕರು,

"ತಾರೆಗಳು ಮೇಳವಿಸಿ ಬಂದು ಬಿಟ್ಟಿಹ ನಾಡು
ನಮ್ಮ ಕನ್ನಡ ನಾಡು
ತಾರೆಗಳ ಒಡಹುಟ್ಟು, ತಾರೆಗಳ ಒಡನಾಡಿ
ನಮ್ಮ ಕನ್ನಡ ನಾಡು

ಭೂಪತಿಯು ಕವಿಯಾಗಿ ಕವಿ ಚಮೂಪತಿಯಾಗಿ
ಮೆರೆದಿರುವ ನಮ್ಮ ಕನ್ನಡ ನಾಡು

ಎಂದು ಕರ್ನಾಟಕವನ್ನು ಸ್ತುತಿಸಿದರೆ, ಅದೇ ಕವಿವಾಣಿಯಿಂದ ಭಾರತಾಂಬೆಯನ್ನು ಕುರಿತು ಹೀಗೆ ಹೇಳಿದರು :

" ನೂರು ದೇವರನೆಲ್ಲ ನೂಕಾಚೆ ದೂರ
ಭಾರತಾಂಬೆಯೆ ದೇವಿ ನಮಗಿಂದು ಪೂಜಿಸುವ ಬಾರ."

ಯಾವ ಆನಂದಕಂದರು

" ಭಯವೇತರದಾವಾಗ ನಮಗೆ ನಿ
ರ್ಭಯರು ನೆರೆಬು ಕುಣಿಕುಣಿದಾಡಿ
ಜಯ ಜಯ ಕರ್ನಾಟಕ ಎನ್ನುತೆ
ಹಾಡುವ ನಾವೆಲ್ಲರು ಕೂಡಿ "

ಎಂದರೋ ಅವರೇ ಭಾರತಾಂಬೆಯನ್ನು ಕುರಿತು

" ಮಾತೃಭೂಮಿ ಜನನಿ ನಿನ್ನ ಚರಣ ಸೇವೆ ಮಾಡುವಾ
ತನುಮನದಿಂದ ನಿನ್ನ ಸುಖಕೆ ಪ್ರಾಣ ನೀಡುವಾ "

ಎಂಬುದಾಗಿ ಹಾಡಿದರು.

ಹೀಗೆ ಕರ್ನಾಟಕತ್ವ ಮತ್ತು ರಾಷ್ಟ್ರೀಯತ್ವಗಳು ಪರಸ್ಪರ ಪೂರಕವಾಗಿ ಕೆಲಸ ಮಾಡಿದವು.

ಏಕೀಕರಣ ಮತ್ತು ರಾಷ್ಟ್ರೀಯ ಚಳವಳಿಗಳು ಹೀಗೆ ಹೊಯ್‌ಕೈಯಾಗಿ ಸಾಗಿದವು. ಡಾ॥ ಹರ್ಡೀಕರರು ಸ್ಥಾಪಿಸಿದ ಹಿಂದೂಸ್ಥಾನೀ ಸೇವಾದಳದ ಕಾರ್ಯಕರ್ತರೇ 1926ರಲ್ಲಿ ಏಕೀಕರಣದ ಪರ 36,000 ಜನರ ಹಸ್ತಾಕ್ಷರ ಸಂಗ್ರಹ ಮಾಡಿದರು.

ಕರ್ನಾಟಕತ್ವದ ಜಾಗೃತಿ ಒಂದು ಗಣ್ಯ ಐತಿಹಾಸಿಕ ಘಟನೆ. ಕರ್ನಾಟಕದಲ್ಲಿ ರಾಷ್ಟ್ರೀಯ ಜಾಗೃತಿಯಲ್ಲೂ ಅದು ಗಣ್ಯ ಪಾತ್ರವಹಿಸಿದೆ. ಈ ಕರ್ನಾಟಕತ್ವದಲ್ಲಿ ಅಭಿಮಾನದ ಜಾಗೃತಿಯು ಇಂದಿಗೂ ನಮ್ಮ ಜನರಲ್ಲಿ ದೇಶವನ್ನು ಕಟ್ಟುವ, ದೇಶವನ್ನು ಸಂಪತ್ ಸಮೃದ್ಧವಾಗಿ ಮಾಡಲು ದುಡಿಯುವಂತೆ ಪ್ರೇರೇಪಿಸುವ ಶಕ್ತಿಯನ್ನು ಹೊಂದಿದೆ. ಇದು ಒಂದು ಸಾತ್ವಿಕವಾದ, ರಚನಾತ್ಮಕವಾಗಿ ಬಳಕೆಯಾಗಬಲ್ಲ ಶಕ್ತಿಯಾಗಿದೆ. "ಸತ್ತಂಥವರನು ಬಡಿದೆಚ್ಚರಿಸು"ವ ಸಂಜೀವನಿ ಮಂತ್ರ ಅದಾಗಿದೆ. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ನಾಡು, ನಾಡ ಇತಿಹಾಸಗಳ ಬಗ್ಗೆ ಅಭಿಮಾನ ಮೂಡಿಸಿ ಇದರ ಜಾಗರಣ ಮಾಡುವುದರ ಅವಶ್ಯಕತೆ ಇಂದಿಗೂ ಇದೆ.

ಆಧಾರ ಗ್ರಂಥಗಳು

1 ಆಲೂರು ವೆಂಕಟರಾವ್, ಕರ್ನಾಟಕ ಗತವೈಭವ, 1917

2 ಆಲೂರು ವೆಂಕಟರಾವ್, ನನ್ನ ಜೀವನ ಸ್ಮೃತಿಗಳು, 1974

3 ಸೂರ್ಯನಾಥ ಕಾಮತ್, ಕರ್ನಾಟಕದ ಸಂಕ್ಷಿಪ್ತ ಇತಿಹಾಸ, 1973

4 ಸೂರ್ಯನಾಥ ಕಾಮತ್ (ಸಂ.), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ಮೂರು ಸಂಪುಟ (1974–80).

5 ಬಿ. ಎಂ. ಶ್ರೀಕಂಠಯ್ಯ (ಸಂ.), ಕನ್ನಡ ಬಾವುಟ, 1938

6 ಬುರ್ಲಿ ಬಿಂದುಮಾಧವ (ಸಂ.), ನಾಡ ಗೀತೆಗಳು, 1946

7 ಶ್ರೀನಿವಾಸ ಹಾವನೂರ, ಹೊಸಗನ್ನಡದ ಅರುಣೋದಯ, ಮೈಸೂರು, 1974.

ಪ್ರಚಾರೋಪನ್ಯಾಸ ಮಾಲೆ

1.	ನಗೆಯ ನೆಲೆ	ಎಸ್. ಕೆ. ರಾಮಚಂದ್ರರಾವ್
2.	ನಕ್ಷತ್ರ ಲೋಕ	ಜಿ. ಟಿ. ನಾರಾಯಣರಾವ್
3.	ಶಾಂತಿನಾಥ ಕವಿ	ಕಮಲ ಹಂಪನಾ
4.	ಶ್ರೀ ಕವಿ ಲಕ್ಷ್ಮೀಶ	ಜಿ. ಎಸ್. ಸಿದ್ಧಲಿಂಗಯ್ಯ
5.	ಉತ್ತಂಗಿ ಚನ್ನಪ್ಪ	ಸ. ಸ. ಮಾಳವಾಡ
6.	ಬಯಲಾಟಗಳು	ಚಂದ್ರಶೇಖರ ಕಂಬಾರ
7.	ನಾಟಕದಲ್ಲಿ ನವ್ಯತೆ	ಪಿ. ಲಂಕೇಶ್
8.	ದ್ರಾವಿಡ ಸಂಖ್ಯಾವಾಚಕಗಳು	ಹಂಪ. ನಾಗರಾಜಯ್ಯ
9.	ಎದೆ ರೋಗಗಳು	ಎಂ. ಬಸವರಾಜೆ ಅರಸು
10.	ಅರವಿಂದರ ವಿಚಾರಧಾರೆ	ಸಿ. ಕೆ. ವೆಂಕಟರಾಮಯ್ಯ
11.	ಪೂರ್ಣಯೋಗಿ ಶ್ರೀ ಅರವಿಂದರು	ಕೋ. ಚನ್ನಬಸಪ್ಪ
12.	ಪ್ರಾಚೀನ ಸಂಸ್ಕೃತಿ	ಎಸ್. ಕೆ. ರಾಮಚಂದ್ರರಾವ್
13.	ಪ್ರಾಚೀನ ಭಾರತದ ಆರ್ಥಿಕ ವ್ಯವಸ್ಥೆ	ಎನ್. ಜಿ. ಚಂದ್ರಶೇಖರಯ್ಯ
14.	ಸಣ್ಣ ಕೈಗಾರಿಕೆಗಳು	ಆರ್. ಎಸ್. ಆರಾಧ್ಯ
15.	ವಿವಾಹ ಪದ್ಧತಿಗಳು	ಎಸ್. ಕೆ. ರಾಮಚಂದ್ರರಾವ್
16.	ಪಾನೀಯಗಳು	ಕೆ. ಎಸ್. ಲಕ್ಷ್ಮಣರಾವ್
17.	ಚಂದ್ರಲೋಕ ಯಾತ್ರೆ	ಪಿ. ಎಸ್. ವೆಂಕಟಸ್ವಾಮಿಶೆಟ್ಟಿ
18.	ಬೆಳಕಿನ ಸ್ವರೂಪ	ಬಿ. ವಿ. ನಾರಾಯಣರಾವ್
19.	ದೂರದರ್ಶನ	ಕೆ. ಶೇಷಾದ್ರಿ ಅಯ್ಯಂಗಾರ್
20.	ಸೂಕ್ಷ್ಮದರ್ಶಕಗಳು ಮತ್ತು ದೂರದರ್ಶಕಗಳು	ಕೆ. ಶೇಷಾದ್ರಿ ಅಯ್ಯಂಗಾರ್
21.	ಕುರುಡು	ಎಸ್. ಟಿ. ಪುಟ್ಟಣ್ಣ
22.	ಕಣ್ಣಿನ ರೋಗಗಳು	ಎಸ್. ಟಿ. ಪುಟ್ಟಣ್ಣ
23.	ಭಯ : ಸರಳ ವಿಶ್ಲೇಷಣೆ	ಎಂ. ಶಿವರಾಂ
24.	ಉಕ್ಕು : ತಯಾರಿಕೆ ಮತ್ತು ರಚನೆ	ಕೆ. ಆರ್. ಮೋಹನ್
25.	ನೀರಾವರಿ ಸಮಸ್ಯೆಗಳು	ಕೆ. ಎನ್. ಶಿವಶಂಕರರಾವ್
26.	ಅಂತರ್ಜಲ	ಸಿ. ನಾಗಣ್ಣ
27.	ಪಂಪ	ತ. ಸು. ಶಾಮರಾಯ
28.	ದೇಹರಚನೆ ಹಾಗೂ ಮೂಳೆಗಳು	ಎಸ್. ಬಿ. ವಸಂತ ಕುಮಾರ್
29.	ಶ್ರೀನಿವಾಸ ರಾಮಾನುಜನ್	ಜಿ. ಟಿ. ನಾರಾಯಣರಾವ್
30.	ಮಹಾಕವಿ ಕುಮಾರನಾಶಾನ್	ಬಿ. ಕೆ. ತಿಮ್ಮಪ್ಪ, ಟಿ. ವೆಂಕಟಲಕ್ಷ್ಮಿ
31.	ತುಳ್ಳಲ್‌ಕವಿ ಕುಂಜನ್ ನಂಬಿಯಾರ್	ಬಿ. ಕೆ. ತಿಮ್ಮಪ್ಪ, ಟಿ. ವೆಂಕಟಲಕ್ಷ್ಮಿ
32.	ಪರಾಮಾನಸಶಾಸ್ತ್ರ	ಎಸ್. ಕೆ. ರಾಮಚಂದ್ರರಾವ್
33.	ಕ್ಷಯ	ಎಂ. ಬಸವರಾಜೆ ಅರಸು